ಅಪರಂಜಿ

ಏಪ್ರಿಲ್ 2001

ತಿಳಿನಗೆಯ ಕಾರಂಜಿ



ಪ್ರಕಾಶ್

ಶಿವು

ಎಂ.ಎನ್.ಕೆ.

ಬೂಸ

ಕ.ಬ. ವೀರಣ್ಣ ಕಣ್ಣಾಗಾಲ

ವಿಜಯ ಸಚ್ಚಿದಾನಂದ

ಜಿ. ರಾಮಚಂದ್ರ

ಸತ್ಯವತಿ

ಅಣ್ಣಾಸ್ವಾಮಿ ಮೊದಲಿಯಾರ್

ಎಂ.ಸಿ. ಅಂಟಿನ

ಬಿಡಿ ಪ್ರತಿ: ರೂ. 5.00



ಗೌರವ ಸಲಹೆಗಾರರು:
ಶ್ರೀ ಅ. ರಾ. ಸೇ.
ಶ್ರೀ ಶೇಷಗಿರಿ
ಸಂಪಾದಕ:
ಶಿವಕುಮಾರ್
ನಿರ್ವಹಣೆ:
ಬೇಲೂರು ರಾಮಮೂರ್ತಿ
ಕೃಷ್ಣ ಸುಬ್ಬರಾವ್

ಚಂದಾ ವಿವರ:
ಬಿಡಿ ಪ್ರತಿ: ರೂ. 5.00
ವಾರ್ಷಿಕ ಚಂದಾ: ರೂ. 60
ಹತ್ತು ವರ್ಷದ ಚಂದಾ : ರೂ. 500
Ph: 3345259
email: aparanji@hotmail.com
website: aparanjimag.com

ವಿಳಾಸ : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003 (ಕೆಲಸದ ವೇಳೆ: ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ)

ಈ ಸಂಚಿಕೆಯಲ್ಲಿ

ಸಂಪುಟ 18 ಏಪ್ರಿಲ್ - 2001 ಸಂಚಿಕೆ -7

ಮುದ್ರಣ: ಇಂಪ್ರೆಶನ್ಸ್, ಬೆಂಗಳೂರು - 3 ಅಕ್ಷರ ಜೋಡಣೆ: ಒಮೇಗಾ ಲೇಸರ್ ಟೆಕ್, ಬೆಂಗಳೂರು 27



೦ ಪ್ರಕಾಶ್

ತನ್ನ ಪ್ರತಿಮೆಯನ್ನು ಒಡೆಯುವ ಕೈಗಳಿಗೆ ನೋವಾಗದಿರಲಿ ಎಂದು ಮಹಾ ಕಾರುಣಿಕ ಪ್ರಾರ್ಥಿಸಿದನಂತೆ

★★★

ತೊಳೆಯುವ ನೆಪದಲ್ಲಿ ಕಾರು ಅಪಹರಣ

- ಸುದ್ದಿ

ಆತನ ಕಾರುಬಾರು ಬಹು ಚೆನ್ನಾಗಿದೆ!!

★★★

'ಮಾರಿಯರಾಗಿ' - ಮಹಿಳೆಯರಿಗೆ ಮುಖ್ಯಮಂತ್ರಿ ಸಲಹೆ

- ಪತ್ರಿಕೆ

ನಾರಿಯರೆಲ್ಲ ನಸುನಕ್ಕರಂತೆ!!

★★★

ದಂತ ವೈದ್ಯಕೀಯ ವಿದ್ಯಾರ್ಥಿಗಳಿಗೆ ಪದವಿ ನೀಡಲು ಹೈ ಕೋರ್ಟ್ ಆದೇಶ

- ಸುದ್ದಿ

ದಂತ ವೈದ್ಯಕೀಯ ಮಂಡಳಿಯ ಕೋಪ ದವಡೆಗೆ ಮೂಲ?!!

★★★

ಚೀನಾದಿಂದ ಭಾರತಕ್ಕೆ ಬೆದರಿಕೆ ಇಲ್ಲ

- ಲೋಕಸಭೆ ಸುದ್ದಿ

ಸುದ್ದಿ ಕೇಳಿ ಚಾಚಾ ನೆಹರು ಬೆಚ್ಚಿಬಿದ್ದರಂತೆ!!

★★★

ಭಾರತ ತಂಡಕ್ಕೆ ವೆಂಕಟಪತಿ ರಾಜು

- ಕ್ರೀಡಾ ಸುದ್ದಿ

ಸಂಕಟ ಬಂದರೆ......??

★★★

ಕಾಂಗ್ರೆಸ್ ಸೇರಲಿರುವ ಶಿವಪ್ಪ

- ಬಿಸಿ ಸುದ್ದಿ

"ಕಾಯೋ ತಂದೆ!!"

★★★

ಚುನಾವಣಾ ಮೈತ್ರಿ; ಕಾಂಗ್ರೆಸ್‌ಗೆ 47 ಸ್ಥಾನ

- ತಮಿಳುನಾಡು ಸುದ್ದಿ

ಮೈತ್ರಿ ಎಂಬ ಶಬ್ದಕ್ಕೆ ಹೊಸ ಅರ್ಥ??

★★★

ಪಾಂಡವಪುರ ಸಕ್ಕರೆ ಕಾರ್ಖಾನೆಗೆ ಪರಿಹಾರ ಇಲ್ಲ

- ಸಚಿವರು

ಕಹಿ ಸುದ್ದಿ!!

★★★

ಓಲ್ಡಿಕನಾಮಿ ನ್ಯೂ ಎಕಾನಮಿ

– ಶಿವು

ಅಂದು ಕಾಮನ ಹಬ್ಬದ ಸಂಜೆ. ಮಂಜು, ನಾಯಕ್, ಶ್ರೀಧರ ಮತ್ತು ನಾನು ಕ್ಲಬ್ಬಿನ ಹುಲ್ಲು ಹಾಸಿನ ಹಂಚಿನಲ್ಲಿದ್ದ ಟೇಬಲ್ಲಿನಲ್ಲಿ ಕುಳಿತು ಬೇರರ್ ಜೋಸಫನ ಬರವನ್ನೇ ಇದಿರು ನೋಡುತ್ತಿದ್ದೆವು. ನೇರವಾಗಿ ನಮ್ಮ ಮೇಲೆ ಚಾಚಿದ್ದ ಗುಲ್ ಮೊಹರ್‌ನ ಹೂಗಳು ಸುತ್ತಲಿನ ಹುಲ್ಲಿನ ಮೇಲೆ ಉದುರಿ ಈ ಸಂಜೆಗತ್ತಲಿನಲ್ಲಿ ಅಸದೃಶ ಬೆಡಗಿನ ಚಾಪೆಯೊಂದನ್ನು ಸೃಷ್ಟಿಸಿದ್ದವು. ನಮ್ಮ ಮಾತುಕತೆ ಎಂದಿನಂತೆ ಸಾಫ್ಟ್‌ವೇರ್ ಹೀಚುಗಳ ಶ್ರೀಮಂತಿಕೆಯ ಸುತ್ತ ಸುಳಿದಾಡುತ್ತಿತ್ತು. ನಾಯಕ ಹೇಳುತ್ತಿದ್ದ.

''ನನ್ನ ಮಗಳಿಗೆ ಮೊನ್ನೆ ಸಾಫ್ಟ್‌ವೇರ್ ಕಂಪನಿಯೊಂದರಲ್ಲಿ ಕೆಲಸ ಸಿಕ್ಕಿತು. ಸಂಬಳ, ಅಲ್ಲ, ಅಲ್ಲ, ಟ್ರೈನಿಂಗ್ ಅವಧಿಯಲ್ಲಿ ಸ್ಟೈಪೆಂಡ್ ಎಷ್ಟಿರಬಹುದು ಗೆಸ್ ಮಾಡಿ ನೋಡೋಣ...'' ಅಂತ ಒಂದು ಛಾಲೆಂಜ್ ಎಸೆದ. ಶ್ರೀಧರ ಸುಮ್ಮನಿರಲಾರದೆ ''ಏನು ಮೂವತ್ತು ಸಾವಿರ ಇರಬಹುದಾ?'' ಅಂತ ಕೇಳಿದ.

''ಇಲ್ಲ ಹದಿನೇಳು ಸಾವಿರ. ಮೊನ್ನೆ ಮೊನ್ನೆ ತಾನೆ ಪಾಸಾಗಿ ಬಂದಿರೋಳಿಗೆ ಇಷ್ಟು ಸಂಪಾದನೆ. ಹದಿನೈದು ವರ್ಷ ಸಣ್ಣ ಉದ್ಯಮ ನಡೆಸಿ ತಿಂಗಳಿಗೆ ಒಂದು ಲಕ್ಷ ವ್ಯಾಪಾರ ಮಾಡಿದ್ರೆ ನನಗೆ ಕೊನೆಗೆ ಸಿಕ್ಕಬಹುದಾದ ಲಾಭದಷ್ಟನ್ನ ಇವಳಿಗೆ ಈವಾಗಲೇ ಕೊಟ್ಟರೆ ನಾನು ಇಷ್ಟು ವರ್ಷ ಪಟ್ಟಿರೋ ಕಷ್ಟಕ್ಕೆ ಅರ್ಥವಾದರೂ ಏನೂ ಅಂತೀನಿ...'' ನಾಯಕ ಮಾತನಾಡುತ್ತಿದ್ದಾಗಲೇ ಜೋಸೆಫ್ ಒಂದು ಟ್ರೇಯಲ್ಲಿ ನಾಲ್ಕು ಡ್ರಾಫ್ಟ್ ಬೀರು, ಎರಡು ಬೋಲ್‌ಗಳಲ್ಲಿ YNK ಉಸಲಿ ತಂದಿಟ್ಟು ಹೋದ. ''ಇದೇನು ನಿಮ್ಮೂರಿನಲ್ಲಿ ಉಸಲೀಗೂ ಇನಿಷಿಯಲ್ಲೇ'' ಅಂತ ನೀವು ಕೇಳುಕ್ಕೆ ಮುಂಚೇನೇ ವಿವರಣೆ ಕೊಟ್ಟುಬಿಡ್ತೇನೆ. ದಿವಂಗತ YNK ನಮ್ಮ ಕ್ಲಬ್ಬಿನಲ್ಲಿ ಮೆಂಬರಾಗಿದ್ದಾಗ ಅವರು ಕ್ಯಾಂಟೀನ್ ಮೇಲ್ವಿಚಾರಕನಿಗೆ ಹೇಳಿ ಸ್ಪೆಷಲ್ಲಾಗಿ ಮಾಡಿಸಿದ ತಿನಿಸು ಈ ಉಸಲಿ. ಸಾಮಾನ್ಯವಾಗಿ ಎಲ್ಲರೂ ಮಾಡುವ ಕಡಲೇಕಾಳು ಉಸಲಿಗೆ ಸ್ವಲ್ಪ ಹೆಚ್ಚು ಕಾಯಿತುರಿ ಹಾಕಿ, ಧಾರಾಳವಾಗಿ ನಿಂಬೇ ರಸ ಹಿಂಡಿ ಹೆರೆದ ಮಾಂಗಾಯ್ ಶುಂಠಿ ತುಣುಕುಗಳನ್ನು ಹದವಾಗಿ ಬೆರೆಸಿದರೆ ಮುಗಿಯಿತು ನಮ್ YNK ಪೇಟೆಂಟ್ ತಿಂಡಿ ಸಿದ್ಧ. ಬೀರನ್ನು ಗುರುಕರಿಸುತ್ತಾ ಮಂಜು ಶುರು ಮಾಡಿದ. ''ಅದೇನೇ ಕಣೋ ಓಲ್ಡ್ ಎಕಾನಮೀಗೂ ನ್ಯೂ ಎಕಾನಮೀಗೂ ಇರೋ ವ್ಯತ್ಯಾಸ. ಓಲ್ಡ್ ಎಕಾನಮಿಲಿ ನಿನ್ನ ಕಷ್ಟಕ್ಕೆ ಪ್ರತಿಫಲಾನ

ಟಾಟ ಬಿರ್ಲಾ ನಿರ್ಧರಿಸ್ತಾ ಇದ್ರು. ನ್ಯೂ ಎಕಾನಮಿಲಿ ಅದು ಅಮೆರಿಕಾದಲ್ಲಿ ನಿರ್ಧಾರ ಆಗುತ್ತೆ. ಡಾಲರಿಗೆ ನಲವತ್ತೈದು ರೂಪಾಯಿ. ಲೆಕ್ಕ ಗೊತ್ತಲ್ಲ.''

ನಾಯಕ ಅಷ್ಟು ಸುಲಭವಾಗಿ ತನ್ನ ಪಟ್ಟು ಬಿಡೋ ಪ್ರಾಣಿ ಅಲ್ಲ. ''ಇದು ಪ್ರತಿಫಲದ ಪ್ರಶ್ನೆ ಅಲ್ಲ ಮಂಜು... ಇಂಜಿನಿಯರಿಂಗ್ ಉದ್ಯಮದ ಮಾರುಕಟ್ಟೇನೇ ಬಿದ್ದು ಹೋಗ್ತಾ ಇದೆ. ನಮ್ಮ ಕೈಗಾರಿಕಾ ಕ್ಷೇತ್ರದಲ್ಲಿ ತಿಂಗಳಿಗೆ ನಾಲ್ಕು ಉದ್ಯಮಗಳು ನೆಲ ಕಚ್ತಾ ಇವೆ. ಹೀಗೇ ಮುಂದುವರಿದ್ರೆ, ಜನ ಇಂಟರ್ನೆಟ್‌ನಲ್ಲಿ ಊಟನೋಡಿ ಕೈಯಲ್ಲಿರೋ ಫ್ಲಾಪಿ ತಿಂದು ಕಾಲಹಾಕಬೇಕಾಗುತ್ತೋ ಏನೋ...''

''ಹಾಗೇನಾಗಲ್ಲ ಬಿಡು ನಾಯಕ. ನಮ್ಮ ದೇಶ ಸಾಫ್ಟ್‌ವೇರ್‌ನಲ್ಲೇ ಹೇರಳವಾಗಿ ಹಣ ಸಂಪಾದಿಸಿದರೆ, ಡೆನ್ಮಾರ್ಕಿನಿಂದ ಬೆಣ್ಣೆ, ಸ್ವಿಟ್ಜರ್ಲೆಂಡಿನಿಂದ ಬ್ರೆಡ್ಡು ತರಿಸ್ಕೊಂಡು ಮಜವಾಗಿರಬಹುದು. ನೀನು ತಯಾರಿಸೋ ಟ್ರಾಕ್ಟರ್ ಭಾಗ ಉಪಯೋಗಿಸಿ ಮಾಡಿದ ಟ್ರಾಕ್ಟರ್‌ನಿಂದ ಉತ್ತು ಬಿತ್ತಿದ ಬೆಳೇನೇ ತಿನ್ನಬೇಕು ಅಂತ ಯಾವ ಶಾಸ್ತ್ರದಲ್ಲಿ ಹೇಳಿದೆ?'' ಶ್ರೀಧರನಿಗೆ ನಾಯಕರನ್ನ ರೇಗಿಸುಕ್ಕೆ ಬಹಳ ಇಷ್ಟ.

''ನಿಜ, ಯಾವ ಶಾಸ್ತ್ರದಲ್ಲೂ ಹೇಳಿಲ್ಲ. ಆದ್ರೆ ನಾಳೆ ಅಮೆರಿಕಾದಲ್ಲಿ ಸಾಫ್ಟ್‌ವೇರ್ ಮಾರ್ಕೆಟ್ ಬಿದ್ದುಹೋಗಿ, ಇಲ್ಲಿ ನಮ್ಮ ಟ್ರಾಕ್ಟರ್‌ಗಳೂ ಇಲ್ದೆ ಜನ ಕಂಗಾಲಾದಾಗ ನಿನ್ನ ಮಗನಿಗೆ ಒಂದು ಗುದ್ದಲಿ ಉದ್ಯಮ ಶುರುಮಾಡುಕ್ಕೆ ಹೇಳು. ಎಲ್ಲರೂ ನೆಲ ಕೆತ್ತುತ್ತಾ ಕುತ್ಕೋಬೋದು....'' ನಾಯಕ ಇನ್ನೂ ಏನೇನು ಹೇಳ್ತಾ ಇದ್ನೋ ಅದೆಲ್ಲಾ at sourse ಎ ನಿಂತು ಹೋಯ್ತು. ಕಾರಣ ದೇವು ನಮ್ಮ ಟೇಬಲ್ಲಿಗೆ ಬಂದ. ನಾಯಕ ಸಡಗರದಿಂದ ಎದ್ದು ಹೋಗಿ ಒಂದು ಬೆತ್ತದ ಕುರ್ಚಿ ತಂದಿರಿಸಿದ.

ದೇವು ತನ್ನ ಕುರ್ಚಿಯಲ್ಲಿ ಕೂತು ಒಂದು ಗುಟುಕು ಹೀರುಕ್ಕಿಲ್ಲ, ನಾಯಕ ತನ್ನ ಅಹವಾಲು ಪ್ರಾರಂಭಿಸಿದ. ''ದೇವು, ಈ ನ್ಯೂ ಎಕಾನಮಿ, ನ್ಯೂ ಎಕಾನಮಿ ಅಂತಾರಲ್ಲಾ ಅದ್ರಿಂದ ನಮ್ಮ ದೇಶದ ಮೆಜಾರಿಟಿ ಜನಕ್ಕೆ ಏನಾದ್ರೂ ಬೆನಿಫಿಟ್ ಆಗಿದೆ ಅನ್ನಿಸುತ್ತೇ ನಿನಗೆ? ಏನೋ ಇನ್ಫರ್ಮೇಷನ್ ಟೆಕ್ನಾಲಜಿ ಹುಡುಗ ಹುಡುಗೀರು ಕೆಲವರಿಗೆ ಕೆಲಸ ಸಿಕ್ಕಿರಬಹುದು. ಅದ್ರಲ್ಲೂ ಅರ್ಧಕ್ಕರ್ಧ ಜನ ಅಮೆರಿಕಾಗೆ ವಲಸೆ ಹೋಗಿರೋದು ಖಂಡಿತ. ಆದ್ರೆ ಇದ್ರಿಂದ ಮಿಕ್ಕ ಉದ್ಯಮಗಳಿಗೆ ಆಗಿರೋ ಹಾನೀನೇ ಹೆಚ್ಚು. ಏನಂತೀಯಾ?''

ದೇವು ಗಂಟಲು ಸರಿಪಡಿಸಿಕೊಂಡ. ಆಗತಾನೇ ಒಂದು ಸ್ಪೂನ್ ಉಸಲಿ ಅವನ ಹೊಟ್ಟೆ ಸೇರಿತು.

''ಉಸಲಿ ಚೆನ್ನಾಗಿ ಮಾಡಿದ್ದಾರೆ ಇವತ್ತು. ಅಂದ ಹಾಗೆ ಉಸಲಿ ಅಂದಾಗ ನೆನಪಿಗೆ ಬಂತು ನೋಡು YNK ಒಮ್ಮೆ ನನಗೊಂದು ಸಂಗತಿ ಹೇಳಿದ್ರು. ಅವರ ಆಪ್ತ ಗೆಳೆಯ ಒಬ್ಬ ಇದ್ನಂತೆ. ಚಿಕ್ಕ ವಯಸ್ಸಿನಿಂದ ಪರಿಚಯ ಇಬ್ಬರಿಗೂ. ಅವನ ಹೆಸರು ನೆನಪಿಲ್ಲ. ರಾಮಣ್ಣ ಅಂತ ಕರೆಯೋಣ. ರಾಮಣ್ಣನಿಗೆ ಒಮ್ಮೆ ಡಿಪಾರ್ಟ್‌ಮೆಂಟಿನಲ್ಲಿ ಪ್ರಮೋಷನ್ ಸಿಕ್ಕಲಿಲ್ಲವಂತೆ. ಮಿತ್ರ YNK ಹತ್ರ ಬಂದು ''ಸಾರ್, ನಮ್ಮ ಡಿಪಾರ್ಟ್ಮೆಂಟಿಗೆ ಈ ಬಾರಿ ಬಜೆಟ್ ಅಲಕೇಷನ್ ಬಹಳ ಕಮ್ಮಿ. ಒಂದೇ ಒಂದು ಪೋಸ್ಟು ಸಾರ್. ಪಾಪ ನಮ್ಮ ಬಾಸ್ ಯಾರನ್ನಾ ಅಂತ ಪ್ರಮೋಟ್ ಮಾಡ್ತಾರೆ...'' ಅಂತ ತನ್ನ ಬಾಸಿಗೆ ಸಿಂಪತಿ ತೋರಿಸಿ ಹೋದ್ನಂತೆ. ಮುಂದೆ ಮಗನಿಗೆ ಎಸ್ಸೆಸೆಲ್ಸಿ ಫೇಲಾದಾಗ ''ಪಾಸ್ ಪರ್ಸೆಂಟೇಜ್ ತೀರ ಕಡಿಮೆ. ಪಾಪ ಮಗೂತಾನೇ ಏನ್ಮಾಡೀತು'' ಅನ್ನೋದು, ಕೆಲಸ ಸಿಕ್ಕದೇ ಮಗ ಅಲೀತಾ ಇದ್ದಾಗ ''ಜಾಬ್ ಮಾರ್ಕೆಟ್ಟೇ ಬಿದ್ದು ಹೋಗಿದೆ ಸಾರ್. ಅವನಾದ್ರೂ ಏನು ಮಾಡ್ತಾನೆ'' ಅಂತ ಸಮಾಧಾನ ಹೇಳ್ಕೊಳ್ಳೋದು, ಹೀಗೆ ಮಾಡ್ಕೊಂಡು ಬರ್ತಿದ್ನಂತೆ. ಒಮ್ಮೆ ರಾಮಣ್ಣ ಸ್ಕೂಟರಿನಲ್ಲಿ ಹೋಗುತ್ತಿದ್ದಾಗ ಬ್ರೇಕ್ ಫೇಲ್ ಆಗಿ ದಾರಿ ಬದಿಯಲ್ಲಿದ್ದ ಮರಕ್ಕೆ ಢಿಕ್ಕಿ ಹೊಡೆದು, ಬಿದ್ದನಂತೆ. ಬಿದ್ದ ರಭಸಕ್ಕೆ ಕಾಲು ಫ್ರಾಕ್ಚರ್ ಆಯಿತಂತೆ. YNK ತನ್ನ ಮಿತ್ರನನ್ನು ನೋಡಲು ಹೋದಾಗ, ''ಏನು ರಾಮು, ಎಂಥ ಅನ್ಯಾಯ. ಈ ಸಾಲು ಮರಗಳನ್ನೆಲ್ಲಾ ಕಡಿಸಿಬಿಡಬೇಕು. ಪಾಪ ನಿನ್ನ ಪಾಡಿಗೆ ನೀನು ಸ್ಕೂಟರಿನಲ್ಲಿ ಹೋಗ್ತಾ ಇದ್ರೆ ಆ ಮರ ನಿನ್ನ ದಾರೀಗೆ ಅಡ್ಡ ಬರೋದೇ. ಎಷ್ಟು ಧಾರ್ಷ್ಟ್ಯ ಅದಕ್ಕೆ'' ಅಂದರಂತೆ. ನಾಯಕ, ನೀನು ಪ್ರಶ್ನೆ ಕೇಳಿದಾಗ ರಾಮಣ್ಣ ನೆನಪಿಗೆ ಬಂದ ನೋಡು. ನಿನಗೆ ವ್ಯಾಪಾರ ಕಡಿಮೆ ಆದ್ರೆ ಲೋಕಕ್ಕೇ ಆಯ್ತು ಅಂತ ಭ್ರಮೆ ಪಟ್ಕೊಳ್ಳೋದು ನಿನಗೆ ಸಾಂತ್ವನ ನೀಡಬಹುದು ನಿಜ. ಆದರೆ ಅದು ಸತ್ಯ ಸಂಗತಿ ಆಗಿರಬೇಕಾಗಿಲ್ಲ ಅಲ್ಲವೇ. ಅದ್ಸರಿ ನಿನ್ನ ಮಗ ಹೇಗಿದಾನೇ?''

ನಾಯಕ ಒಳ್ಳೇ ಸ್ಪೋರ್ಟ್. ಅಲ್ಲದೇ ದೇವು, ಅಂದ್ರೆ ಅವನಿಗೆ ಭಕ್ತಿ ಮಿಶ್ರಿತ ಪ್ರೀತಿ. ನಗುನಗುತ್ತಾನೇ, ''ಸ್ಯಾನ್ ಹೊಸೇನಲ್ಲಿದ್ದಾನೆ. ಅವನಿರೋ ಕಡೆ ಭಾರತೀಯರು ಬಹಳವಂತೆ. ಯಾವುದೇ ಹತ್ತು ಭಾರತೀಯರನ್ನ ತೆಗೆದುಕೊಂಡರೆ, ನಾಲ್ಕು ತೆಲುಗರು, ಮೂರು ಕನ್ನಡಿಗರು ಒಬ್ಬ ತಮಿಳ. ಇನ್ನಿಬ್ಬರು ಉತ್ತರದೋರು ಅಂತ ಬರೆದಿದ್ದ. ಅಂದಹಾಗೆ ನೀನು ಅಮೆರಿಕಾಗೆ ಹೋಗಿದ್ದೆ ಅಲ್ಲವೇನೋ. ಆರು ತಿಂಗಳು ಅಲ್ಲಿರುಕ್ಕೆ ಬೇಸರ ಆಗಲಿಲ್ವೇ.''

ಅಷ್ಟರಲ್ಲಿ ನಮ್ಮ ಕ್ಲಬ್ ಪ್ರೆಸಿಡೆಂಟ್ ನಮ್ಮ ಟೇಬಲ್ಲಿಗೆ ಬಂದ. ಇನ್ನೊಂದು ವರ್ಷ ತನ್ನ ಅಧಿಕಾರ ಮುಂದುವರೀಬೇಕು ಅಂತ ಅವನಿಗೆ ಮಹತ್ತರವಾದ ಆಸೆ. ಅರ್ಥವಿಲ್ಲದ ಮಾತುಗಳನ್ನಾಡಿ, ಅವನಿಗೇ ನಮ್ಮ ಮತ ಅಂತ ಹುಸಿ ಭರವಸೆನೀಡಿ, ಅವನನ್ನ ಸಾಗುಹಾಕಿದೆವು.

''ಬೇಸರ ಅನ್ನೋದು ನಮ್ಮ ಮನೋ ವೃತ್ತಿಯನ್ನ ಅವಲಂಬಿಸಿರುತ್ತೆ. ನನ್ನ ಪುಣ್ಯಕ್ಕೆ ನನ್ನ ಮಗಳ ಮನೇಲಿ ಇರೋ ಕಂಪ್ಯೂಟರಿನಲ್ಲಿ ಮಲ್ಟಿಮೀಡಿಯಾ ಸಾಫ್ಟ್‌ವೇರ್ ಇತ್ತು. ಅದನ್ನ ಕಲಿಯೋದು ಎಷ್ಟು ಇಂಟರೆಸ್ಟಿಂಗ್ ಆಗಿರುತ್ತೆ ಅಂತಿರಾ?'

''ಯವ್ದಾದರೂ ಟ್ರೇನಿಂಗ್ ಕೋರ್ಸ್‌ಗೆ ಹೋಗಿದ್ರಾ, ದೇವು?'' ಶ್ರೀಧರ ಕೇಳಿದ.

''ಟ್ರೇನಿಂಗೂ ಇಲ್ಲ, ಎಂಥದೂ ಇಲ್ಲ. ಈ ಅಧುನಿಕ ಸಾಫ್ಟ್‌ವೇರ್‌ಗಳೆಲ್ಲಾ ತುಂಬಾ ಯೂಸರ್ ಫ್ರೆಂಡ್ಲಿ. ನಾಲ್ಕು ದಿನ ಹೆಲ್ಪ್ ಮೆನು ನೋಡಿದ್ರೆ ಸಾಕು, ಎಲ್ಲಾ ಅರ್ಥ ಆಗಿಬಿಡುತ್ತೆ. ಕಾರ್ಟೂನ್ ಫಿಲ್ಮ್, ಮಾಡಬೇಕಾದ್ರೆ ಎಷ್ಟೆಲ್ಲಾ ತಯಾರಿ ಬೇಕು ಅನ್ನೋದು ಚೆನ್ನಾಗಿ ತಿಳೀತು. ಆರು ತಿಂಗಳು ಹೋಗಿದ್ದೇ ತಿಳೀಲಿಲ್ಲ.''

''ಸದ್ಯ ಈಗ ಹಿಂದಕ್ಕೆ ಬಂದಿದೀಯಲ್ಲ. ಇನ್ನು ಸಂಜೆ ಹೊತ್ತು ಆರಾಮವಾಗಿ ನಿನ್ನ ಜೊತೆ ಕೂತು ಬೀರು ಹೀರಬಹುದು...'' ನಾಯಕ ಹೇಳತೊಡಗಿದ. ನಾಯಕನ ಮಾತನ್ನ ಅರ್ಧಕ್ಕೇ ತುಂಡಿರುಸುತ್ತಾ, ದೇವು

''ಖಂಡಿತಾ. ಆದ್ರೆ ಒಂದು ಕಂಡೀಷನ್ ಮೇಲೆ. ನೀವೆಲ್ಲಾ ನನಗೆ ಒಂದು ಭಾಷೆ ಕೊಡಬೇಕು''

''ಏನದು?? ಏನಂತ ಭಾಷೆ ಕೊಡಬೇಕು?'' ನಾವೆಲ್ಲಾ ಒಕ್ಕೊರಲಿನಿಂದ ಕೇಳಿದೆವು.

ಗ್ಲಾಸಿನಲ್ಲಿದ್ದ ಕೊನೆಯ ಗುಟುಕನ್ನು ಹೀರಿ ದೇವು ಎದ್ದು ನಿಂತು, ಹೇಳಿದ.

''ನೀವೆಲ್ಲಾ ಕಂಪ್ಯೂಟರ್ ಲಿಟರೇಟ್ ಆಗಬೇಕು ಕಣ್ರೋ. You really have no idea what you are missing. It is such a wonderful world out there in Cyber space. ನನಗೆ ಪ್ರಾಮಿಸ್ ಮಾಡಿ.'' ಹರಳೆಣ್ಣೆ ಮುಖದಿಂದ ನಾವೆಲ್ಲಾ ''ಹ್ಞೂ'' ಅಂದೆವು. ನಮ್ಮ ಗೆಳೆತನದಲ್ಲಿ ಮೊದಲ ಬಾರಿಗೆ ದೇವು ಅಲ್ಲಿಂದ ಹೋದರೆ ಸಾಕೆನಿಸಿತ್ತು ನಮಗೆ.

★★★

ಮದರ್ ಆಫ್ ಆಲ್

– ಎಂ.ಎನ್ᶜ.ಕೆ.

ಮೊನ್ನೆ ಅಟಲ್ಜಿಯವರ ಮಂಡಿ ಆಪರೇಷನ್ ಆದಾಗ ಅದನ್ನ "ಮದರ್ ಆಫ್ ಆಲ್ ಆಪರೇಶನ್ಸ್" ಅಂತ ಬರೆದರು ಪತ್ರಿಕೆಗಳಲ್ಲಿ. ಹಾಗೇನೆ ಈ ಥರ ಯಾವುದಾದರೂ ದೊಡ್ಡ ಕುದುರೆ ಚೇಷ್ಟೆ ನಡೆದರೆ ಅದಕ್ಕೆ ಇನ್ನೊಂದು ಮದರ್ ಹೆಸರು ಬರುತ್ತೆ. 10 ವರುಷಗಳ ಕಾಲ ಇರಾಕ್ - ಇರಾನ್ ಯುದ್ಧ ಆದಾಗ ಅದನ್ನ ಮದರ್ ಆಫ್ ಆಲ್ ಬ್ಯಾಟಲ್ಸ್ ಅಂದರು ಸದ್ದಾಂ ಹುಸೇನ್.

ಅಮೆರಿಕಾದಲ್ಲಿ ಅಲ್ಲಿನ ಪ್ರೆಸಿಡೆಂಟ್ ಜಾಗಕ್ಕೆ ಚುನಾವಣೆ ಕಾಲದಲ್ಲಿ ಸ್ಪರ್ಧಿಗಳು ಟೀವೀಲಿ ಮಾಡೋ ಡಿಬೇಟ್‌ಗೆ ಮದರ್ ಆಫ್ ಆಲ್ ಡಿಬೇಟ್ಸ್ ಅಂತಾರೆ. ಹಾಗೇನೇ ಈಗ ಅಲ್ಲಿ ನಡೀತಿರೋ ಹಗರಣಕ್ಕೆ mother of all countings ಅಂತಾನೋ ಇಲ್ಲಾ mother of all court battles ಅಂತಾನೋ ಅನ್ನೋದೇನೋ.

ನಮ್ಮ ಪುಣ್ಯ ಭೂಮಿ ಭಾರತಿ, ಸುರಮ್ಯ ಭೂಮಿ ಭಾರತಿಯಲ್ಲೂ ಈ ಥರ ಮದರ್ಸ್ ಆಫ್ ಆಲ್ ಗಳಿಗೆ ಕೊರತೆ ಇಲ್ಲ.

1. ಮದರ್ ಆಫ್ ಆಲ್ ಮದುವೇಸ್;

ಕುಮಾರಿ ಜ ಜ ಮಾಡಿದ ತನ್ನ ದತ್ತು ಮಗನ ಮದುವೆಯನ್ನು ನೋಡಿದವರು "ಆಹಾ ನಿಸ್ಸಂದೇಹವಾಗಿ ಇದೇ ಮದರ್ ಆಫ್ ಆಲ್ ಮದುವೇಸ್" ಅಂದಿದ್ರು. ಆ ಮದುವೇಗೆ 100 ಕೋಟಿ ಖರ್ಚಾಯ್ತಂತೆ. ಹೋಗಿದ್ದವರಿಗೆಲ್ಲಾ ಜರತಾರಿ ಸಿಲ್ಕ್ ಪಂಚೆ, ಕಾಂಜೀವರಂ ಸೀರೆ ಪುಗಸಟ್ಟೆ ಸಿಗ್ತಂತೆ. ಮದುವೆ ಅಂದರೆ ಅದು. ಹಿಂದಿನ ಕಾಲದಲ್ಲಿ ಪಾಂಡ್ಯ, ಚೋಳ, ಪಲ್ಲವ ರಾಜರು ಮಾಡುತ್ತಿದ್ದ ತಮ್ಮ ರಾಜಕುಮಾರ, ಕುಮಾರಿಯರ ಮದುವೆಯನ್ನೂ ಮೀರಿಸಿತ್ತಂತೆ ಈ ಮದುವೆ. ಸರಿ, ಇದೇ "Mother of all madhuves of the twentieth century" ಅನ್ನೋಷ್ಟರಲ್ಲಿ ಬಂತು competition from the north ನಾವೇನ್ ಕಮ್ಮೀನಾ ಅಂತ ಲಾಲೂ - ರಾಬ್ರಿ ತಮ್ಮ ಮಗಳ ಮದುವೇನೂ ಧಾಂ - ಧೂಂ ಅಲ್ಲಿ ಮದುವೆ ಮಾಡಿದರು. ಈಗ ಬಂತು ಪೀಕಲಾಟ. "ಮದರ್ ಆಫ್ ಆಲ್ ಮದುವೇಸ್' ಪ್ರಶಸ್ತಿ ಯಾರಿಗೆ ಕೊಡೋದೂಂತ. ಇವರಿಗೆ ಕೊಟ್ಟರೆ ಅವರಿಗೆ ಕೋಪ. ಅವರಿಗೆ ಕೊಟ್ಟರೆ ಇವರಿಗೆ ಕೋಪ. ಇದೊಂದು "ಮದರ್ ಆಫ್ ಆಲ್ ಡೈಲಮಾಸ್" ಆಗಿ ಕೂತಿದೆ.

ಇನ್ಕಂಟಾಕ್ಸ್‌ನೋರು ಎರಡೂ ಮದುವೇನ ತನಿಖೆ ಮಾಡ್ತಿದ್ದಾರಂತೆ. ಅವರೇ ಡಿಸೈಡ್ ಮಾಡ್ಲಿ ಯಾರ ಖರ್ಚು ಜಾಸ್ತಿ ಇತ್ತು, ಯಾರ ಧಾಂ - ಧೂಂ ವಿಪರೀತ ಇತ್ತು ಅನ್ನೋದನ್ನ. ಅವರು ಹೇಳಿದಮೇಲೆನೇ ಈ ಟೈಟಲ್ ಕೊಡೋದು. ಅಲ್ಲೀವರ್ಗೂನೂ ಸ್ಟೇ ಆರ್ಡರ್ ಜಾರೀಲಿರುತ್ತೆ.

2. ಮದರ್ ಆಫ್ ಆಲ್ corruptions.

ನಮ್ಮ ಈ ಭವ್ಯ ಭಾರತದಲ್ಲಿ ಈ ಪ್ರಶ್ನೆಗೆ ಉತ್ತರ ಸಿಗೋದು ಬಹು ಕಷ್ಟ. ಇಲ್ಲಿ ಪೈಪೋಟಿ ವಿಪರೀತ. ಉತ್ತರ ಪ್ರದೇಶದ ಅಧಿಕಾರೀ ವರ್ಗ ತಮ್ಮ ತಮ್ಮಲ್ಲೇ ಮೂರು ಜನರನ್ನು ಚುನಾಯಿಸಿದರಂತೆ;

ಭ್ರಷ್ಟ. ತೀವ್ರ ಭ್ರಷ್ಟ ಮತ್ತು ಅತೀ ತೀವ್ರ ಭ್ರಷ್ಟ, ಇವೇ ಆ ಮೂರು ಮಟ್ಟ.

ಇದರಿಂದ ಅನೇಕರು ಕುಪಿತರಾದರಂತೆ. ''ಈ ಚುನಾವಣೆ ಸರಿಯಾಗಿ ನಡೆದಿಲ್ಲ. ಚುನಾವಣಾ ಕ್ರಿಯೆ ಸಮರ್ಪಕವಾಗಿಲ್ಲ. ಅನೇಕ ಅಭ್ಯರ್ಥಿಗಳಿಗೆ ಸ್ಪರ್ಧಿಗಳು ಅವಕಾಶ ಕೊಡಲಿಲ್ಲ. ಆದ್ದರಿಂದ ಈ ಚುನಾವಣೆಯನ್ನು ರದ್ದುಗೊಳಿಸಿ ಮರುಚುನಾವಣೆಯಾಗಬೇಕು'' ಇದೇ ಈ ಕೂಗು. ಬರೀ ಅಧಿಕಾರಿಗಳಿಗೇ ಏಕೆ ಇದು ಸೀಮಿತ. ನಮ್ಮನ್ನೂ ಸೇರಿಸಿಕೊಳ್ಳಿ ಅಂತ ಇತರರ ಕೂಗು.

ಇದು ಏನೇ ಬರಲಿ ಹೋಗಲಿ ಸದ್ಯಕ್ಕೆ ಈ mother of all corruptions ಬಿರುದಿಗೆ ಸತ್ಪಾತ್ರರು ಇನ್ನೂ ಸಿಕ್ಕಿಲ್ಲ. ಪೈಪೋಟಿ ತೀವ್ರವಾಗೇ ಇದೆ.

3. ಮದರ್ ಒಫ್ ಆಲ್ ಭರವಸೆ

ಇದಕ್ಕೇ ಯಾವ ಪೈಪೋಟೀನೂ ಇಲ್ಲ it is crystal clear. ನಮಗೆ ಸ್ವಾತಂತ್ರ್ಯ ಬಂದಾಗಲಿಂದ ಇಂದಿನವರೆಗೆ ನಮ್ಮನ್ನಾಳುತ್ತಿರುವ ಸಕಲ ರಾಜಕಾರಿಣೀಗಳೂ ಕೊಡುತ್ತಿರುವ ಆಶ್ವಾಸನೆ ''ಬಡತನ ನಿರ್ಮೂಲನ'' ಅಲಿಯಾಸ್ ''ಗರೀಬೀ ಹಟಾವೋ''. ಅಧಿಕಾರಕ್ಕೆ ಬಂದ ಎಲ್ಲಾ ಸರ್ಕಾರಗಳೂ ಹೇಳಿದ್ದು, ಹೇಳುತ್ತಿರೋದೂ ''ನಾವು ಅಧಿಕಾರದಲ್ಲೇ ಇದ್ದರೆ ಇನ್ನೂ ಹತ್ತು ವರುಷಗಳಲ್ಲಿ ಗರೀಬಿನ ಹಟಾವ್ ಮಾಡೇ ಬಿಡ್ತೀವೀಂತ''. ಇದೇ ಮದರ್ ಆಫ್ ಆಲ್ ಭರವಸೇಸ್. ನಾವು ಯಾರನ್ನೂ ಹತ್ತು ವರುಷ ಅಧಿಕಾರದಲ್ಲಿರಲು ಬಿಡಲ್ಲ. ಗರೀಬೀ ಹಟಾವ್ ಆಗುಲ್ಲ. ಎರಡು ಅಥವಾ ಮೂರು ವರುಷಕ್ಕೇ ಇವರಿಗೆಲ್ಲಾ ಹಟಾವ್ ಆಗೋದ್ರಿಂದ ಈ ಗರೀಬೀ ಹಟಾವಿಗೆ ಇನ್ನೂ ಕಾಲ ಕೂಡಿಬಂದಿಲ್ಲ. ಹಾವು ಸಾಯಲ್ಲ, ಕೋಲು ಮುರಿಯೊಲ್ಲ ಅನ್ನೋ ಥರ. ಇದೇ mother of all ಭರವಸೇಸ್.

4. ಮದರ್ ಆಫ್ ಆಲ್ ಬೋರ್ಸ್

ನಮ್ಮ V.K. Krishna Menon ಯು.ಎನ್.ಓ. ದಲ್ಲಿ 16 ಘಂಟೆ ಭಾಷಣ ಮಾಡಿದ್ದು ಜ್ಞಾಪಕಾ ಇದೆಯಾ? ಅದನ್ನು Time magazine "biggest bore of the century" ಅಂತ ಹೇಳಿತ್ತು. ಆದರೆ ನನ್ನ ಪ್ರಕಾರ mother of all bores ನಾಮಕರಣ ಸಲ್ಲಬೇಕಾದ್ದು ನಮ್ಮ ಮಾಜಿ ಪ್ರಧಾನ ಮಂತ್ರಿಗಳಿಗೆ. ಲೋಕ ಸಭೇಲಿ ವಿಶ್ವಾಸ ಕಳೆದುಕೊಳ್ಳುವಾಗ ಇವರು ಮಾಡುವ ಗಂಟೆಗಟ್ಟಲೆ ಭಾಷಣಕ್ಕೇ ಈ ಟೈಟಲ್ ಸಲ್ಲಬೇಕು. ಅಟಲ್ಜೀ ತಮ್ಮ ಮೊದಲನೇ ಸರದಿಯಲ್ಲಿ ಹದಿಮೂರು ದಿನಕ್ಕೇ ಅಧಿಕಾರ ಕಳಕೊಂಡಾಗ, ನಮ್ಮ ಮಣ್ಣಿನ ಮಗ ಹತ್ತು ತಿಂಗಳಿಗೇ ಜಾಗಾ ಖಾಲೀ ಮಾಡಿದಾಗ, ಗುಜ್ರಾಲ್ ಜೀ ಕುರ್ಚಿ ಹಲವೇ ತಿಂಗುಳಲ್ಲಿ ಮುಗುಚಿಕೊಂಡಾಗ, ಇವರೆಲ್ಲಾ ಹೇಳಿದ್ರೆಲ್ಲಾ "ನಾನು ಇನ್ನೂ ಅಧಿಕಾರದಲ್ಲೇ ಇದ್ದಿದ್ರೆ ಇನ್ನೇನೇನೊ ಮಾಡಿ ತೋರಿಸ್ತಿದ್ದೇಂತ, ಅದಕ್ಕಿಂತಾ ಬೇಕಾ ಬೇರೆ ಬೋರ್. ಈ ಮದರ್ ಆಫ್ ಆಲ್ ಬೋರ್ಸ್ ನಾಮಕರಣ ಇವರಿಗೇ ಅನ್ವರ್ಥನಾಮ.

ಇನ್ನೂ ಇವೆ ಅನೇಕ mother ಗಳು. mother of all abuses, mother of all ಆಷಾಢ ಭೂತೀಸ್ ಇತ್ಯಾದಿ, ಇತ್ಯಾದಿ. ಸರಿಯಾದ candidates ಸಿಕ್ಕಾಗ ಡಿಸೈಡ್ ಮಾಡೋಣ. ಸುಮ್ಮನೇ ಅವಸರ ಯಾಕೇಂತ.

ಅಜ್ಜಿ

ಖಾಯಿಲೆಯಿಂದ ಆಗತಾನೇ ಚೇತರಿಸಿಕೊಂಡಿದ್ದರು ಅಜ್ಜಿ
ಪ್ರಶ್ನಿಸಿದರು ಪಾರ್ವತಮ್ಮನೋರು
ಅಜ್ಜಿಯ ಮೊಮ್ಮಗಳನ್ನು
ಅಜ್ಜಿ ಓಡಾಡಿಕೊಂಡಿದಾರಾ?
ಅಯ್ಯೋ ಕೂತ್ಕೊಳ್ಳದೇ ಕಷ್ಟ
ಓಡೋದಲ್ಲಂತೂ
ಆಡೋದಲ್ಲಂತೂ॥

– ಎನ್. ನಾಗರಾಜ

'ಹಾಸ್ಯೋತ್ಸವ'ದ ರಹಸ್ಯ ಗಣಿತ

– ಬೂಸ

ಪ್ರತಿವರ್ಷ ವರ್ಷಾದಿಯಲ್ಲೇ ಆ ವರ್ಷದಲ್ಲಿ ತಪ್ಪದೇ ಭಾಗವಹಿಸಬೇಕೆಂದು ನನ್ನವಳು ಗುರ್ತು ಮಾಡಿಕೊಳ್ಳುವ ಕಾರ್ಯಕ್ರಮಗಳಲ್ಲಿ ಡಿಸೆಂಬರ್ 25 ರಂದು ನಡೆಯುವ 'ಹಾಸ್ಯೋತ್ಸವ' ಅಗ್ರಸ್ಥಾನವನ್ನು ಗಳಿಸುತ್ತಿದೆ. ಅದಕ್ಕೆ ಒಂದು ತಿಂಗಳ ಮುಂಚಿನಿಂದಲೇ ಡಿಸೆಂಬರ್ ತಿಂಗಳಲ್ಲಿ ಬರುವ ಕಾರ್ಯಚಟುವಟಿಕೆಗಳು ಡಿಸೆಂಬರ್ 25ನ್ನು ಸೋಂಕದಂತೆ ಅವಳು ತೋರಿಸುವ ಕುಶಲತೆ ಯಾರಾದರು ಮೆಚ್ಚುವಂತಹುದೇ. ಅವಳ ಆ ಚಾಣಕ್ಷತೆಯಿಂದಾಗಿ ಜೀವನದ ಜಂಜಾಟದಲ್ಲಿ ಸದಾ ಮುಳುಗಿ ತೊಳಲಾಡುತ್ತಿರುವ ನಾನೂ ಸಹ ಆ ದಿನದಂದು ಯಾರಿಗೂ ಸಿಗುವಂತಿರುವುದಿಲ್ಲ. ತನ್ನೊಂದಿಗೆ ಆ ದಿನದ ಕಾರ್ಯಕ್ರಮದಲ್ಲಿ ಭಾಗವಹಿಸಲು ನನ್ನನ್ನೂ ಸಹ ಬಿಡುವು ಮಾಡಿಕೊಳ್ಳುವ ನನ್ನ ಅರ್ಧಾಂಗಿಯ ಯೋಜನೆಯ ಹಿನ್ನಲೆ ಇಷ್ಟೇ, ಅವಳು ಹೇಳಿ ಕೇಳಿ ಕಟ್ಟಾ ಸಾಹಿತ್ಯಾಭಿಮಾನಿ ಮತ್ತು ಕಲಾಭಿಮಾನಿ ಕೂಡ. ಅವಳ ಈ ಪ್ರವೃತ್ತಿಯಿಂದಾಗಿ ಇಂಥಹ ಸಂದರ್ಭಗಳನ್ನು ಅವಳೆಂದೂ ಯಾವ ಕಾರಣಕ್ಕಾಗಿಯೂ ಕಳೆದುಕೊಳ್ಳಲು ಇಷ್ಟಪಡುವುದಿಲ್ಲ. ಆದರೆ 'ಹಾಸ್ಯೋತ್ಸವ' ನಡೆಯುವುದು ಜಯನಗರದ ಒಂದು ಕೊನೆಯಲ್ಲಿ ನಾವು ವಾಸಮಾಡುವುದು ಬಸವೇಶ್ವರ ನಗರದ ಇನ್ನೊಂದು ಕೊನೆಯಲ್ಲಿ (ಹಾಸ್ಯೋತ್ಸವ ಪ್ರಾರಂಭವಾದ ಮೊದಲೊಂದೆರಡು ಸಂದರ್ಭಗಳಲ್ಲಿ ಅದರ ಹಾಸ್ಯಬ್ರಹ್ಮರುಗಳು ಅದನ್ನು ನಗರದ ಮಧ್ಯದಲ್ಲಿರುವ ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ವರ್ಗಾಯಿಸುವ ಚಟಾಕಿ ಹಾರಿಸಿದರಾದರೂ ಅರ್ಥಗರ್ಭಿತವಾದ ಆ ಹೇಳಿಕೆ ಅದೇಕೋ ಇಲ್ಲಿಯವರೆಗೂ ಹಾಸ್ಯವಾಗಿಯೇ ಉಳಿದಿದೆ. ಇಲ್ಲದಿದ್ದಲ್ಲಿ ಪ್ರತಿವರ್ಷವೂ ಕಿಕ್ಕಿರಿದ ಜನಸ್ತೋಮಕ್ಕೆ ನಡೆಯುವ ಈ ವಾರ್ಷಿಕ ಉತ್ಸವವನ್ನು ಹೆಚ್.ಎನ್. ಕಲಾಂಗಣದಿಂದ ಕಡೆಯಪಕ್ಷ ಹೆಚ್.ಎನ್. ಅವರದೇ ಆದ ನ್ಯಾಷನಲ್ ಕಾಲೇಜು ಕ್ರೀಡಾಂಗಣಕ್ಕಾದರೂ ವರ್ಗಾಯಿಸುವ ಹಂಚಿಕೆಯನ್ನು ನಡೆಸಬಹುದಾಗಿತ್ತು. ಅದರ ಮಾತು ಹಾಗಿರಲಿ ಕಾಲಗತಿಯ ಹೊಡೆತಕ್ಕೆ ಸಿಕ್ಕಿಬಿದ್ದು ನನ್ನೊಬ್ಬನಿಗೆ ಮಾತ್ರ ಮೆಚ್ಚುಗೆಯಾಗುವ ದೇಹದಾರ್ಢ್ಯವನ್ನು ಹೊಂದಿರುವ ನನ್ನಾಕೆಗೆ ಆ ದಿನದ ಕಾರ್ಯಕ್ರಮಕ್ಕೆ ಮುಂಚಿತವಾಗಿ ಹೋಗಿ ತನ್ನ ಆಸನವನ್ನು ಭದ್ರಪಡಿಸಿಕೊಳ್ಳಲು ಅವಕಾಶವಿರುವ ಸುಲಭೋಪಾಯವೆಂದರೆ ನನ್ನೊಡನೆ ನನ್ನ ದ್ವಿಚಕ್ರ ವಾಹನದಲ್ಲಿ ತೆರಳಿ ಯಾವ ತೊಂದರೆ ಕಾರ್ಪಣ್ಯಗಳೂ ಇಲ್ಲದೆ ತನ್ನ ಆಸನವನ್ನು ಆಕ್ರಮಿಸಿಕೊಳ್ಳುವುದು. ನಾನಾಗಿ ಮನಸಾರ ಯಾವುದೇ ಕಾರ್ಯಕ್ರಮವನ್ನು

ನಡೆಸಿಕೊಳ್ಳುವುದಕ್ಕಾಗಲೀ ಪೂರ್ವ ಯೋಜನೆ ಮತ್ತು ಸಿದ್ಧತೆಗಳನ್ನು ಮಾಡಿಕೊಂಡ ಸಂದರ್ಭ ನನ್ನ ಜೀವಮಾನದಲ್ಲೇ ಬಹಳ ವಿರಳ. ಹಾಗಿದ್ದಾಗ್ಯೂ ನನ್ನವಳ ದೂರಾಲೋಚನೆಯಿಂದಾಗಿ ಹಾಸ್ಯೋತ್ಸವದಂದು ನನಗೂ ಸಲೀಸಾಗಿ ಬಿಡುವು ದೊರೆತು, ಅವಳ ಸಾರಥಿತ್ವವನ್ನು ನಡೆಸುವ ನೆಪದಲ್ಲಿ ಪ್ರತಿವರ್ಷವೂ ನಾನೂ ಅದರಲ್ಲಿ ಭಾಗವಹಿಸುವ ಯೋಗ ಒದಗುತ್ತಿರುವುದರಿಂದಾಗಿ ಈಚೀಚೆಗೆ ನನಗೂ ಯಾವುದೇ ಕಾರಣಕ್ಕಾಗಿಯಾದರೂ ಈ ಒಂದು ಸಂದರ್ಭವನ್ನು ತಪ್ಪಿಸಿಕೊಳ್ಳಬಾರದೆಂಬ ಗೀಳು ಉಂಟಾಗಿದೆ. ಅದರಿಂದಾಗಿ ಅವಳ ಪೂರ್ವ ಯೋಜನೆಗಳಿಗೆಲ್ಲಾ ನಾನೂ ಸ್ಪಂದಿಸಿ, ಅಂದಿನ ದಿನ ಯಾವ ಇರಸೂ ಮುರಸೂ ಇಲ್ಲದೆ ಅವಳ ದೆಸೆಯಿಂದಾಗಿ ಇಡೀ ದಿನ ಅವಳೊಂದಿಗೆ ನಾನೂ ಹಾಸ್ಯೋತ್ಸವದಲ್ಲಿ ಭಾಗವಹಿಸಿ ತೃಪ್ತಿ ಪಟ್ಟುಕೊಳ್ಳುವ ಸುಯೋಗ ನನ್ನ ಪಾಲಿಗೆ ಇಡೀ ವರ್ಷದಲ್ಲಿ ಇದೊಂದೇ.

ದುರದೃಷ್ಟವಶಾತ್ ಕಳೆದ ಡಿಸೆಂಬರ್ 25 ರಂದು ಹಲವಾರು ಅನಿವಾರ್ಯ ಸಂದರ್ಭಗಳಿಗೆ ಕಟ್ಟುಬಿದ್ದು ನಾನು ಮೈಸೂರಿಗೆ ಹೋಗಲೇಬೇಕಾದ ಪರಿಸ್ಥಿತಿ ಒದಗಿ ಬಂದು ನನಗೆ ಆ ದಿನವೆಲ್ಲಾ ನನ್ನ ಬಾಳಿನ ಒಂದು ಅಮೂಲ್ಯ ಸಂದರ್ಭವನ್ನು ಕಳೆದುಕೊಂಡ ವೇದನೆಯನ್ನು ನನ್ನಲ್ಲಿ ಉಂಟುಮಾಡಿ ಅತೀವ ಬೇಸರವನ್ನುಂಟುಮಾಡಿತ್ತು. ಆದರೆ ನನ್ನವಳು ಚತುರೆ. ನನ್ನ ಅನಿವಾರ್ಯತೆಯಿಂದಾಗಿ ಎಲ್ಲಿ ತನ್ನ ಅವಕಾಶಕ್ಕೆ ಭಂಗಬರುತ್ತದೆಯೋ ಎನ್ನುವ ದೃಷ್ಟಿಯಿಂದ ಪದ್ಮನಾಭನಗರದಲ್ಲಿರುವ ತನ್ನ ಖಾಸಗಿ ತಂಗಿಯೊಡನೆ ಸಂಧಾನ ನಡೆಸಿ, ಅವಳ ಮನ ಒಲಿಸಿ, ಹಾಸ್ಯೋತ್ಸವದ ಹಿಂದಿನ ದಿನವೇ ಅವರ ಮನೆಯಲ್ಲಿ ಬಿಡಾರ ಹಾಕಿ, ಮಾರನೇ ದಿನ ತನ್ನ ಪ್ರೀತಿಯ ಸಹೋದರಿಯ ಸಹಯೋಗದಲ್ಲಿ 'ಹಾಸ್ಯೋತ್ಸವ'ವನ್ನು ವೀಕ್ಷಿಸುವ ಮಹದ್ ಯೋಜನೆಯನ್ನು ಸಿದ್ಧಪಡಿಸಿಕೊಂಡು ನಾನಿಲ್ಲದಿದ್ದರೆ ಅವಳಿಗೆ 'ಹಾಸ್ಯೋತ್ಸವ'ದ ಯೋಗವೇ ಇಲ್ಲ ಎಂಬ ನನ್ನ ನಂಬಿಕೆಯ ಕೋಟೆಯನ್ನು ಛಿದ್ರ ವಿಛಿದ್ರಗೊಳಿಸಿದ್ದಳು.

ಮಾರನೇ ದಿನ ಮೈಸೂರಿನ ಪ್ರಯಾಣದಿಂದ ಸುಸ್ತಾಗಿ ಬಂದ ನನ್ನನ್ನು ಸಂತೈಸುವುದು ಹಾಗಿರಲಿ, ತಂಗಿಯ ಮನೆಯ ತಂಪನ್ನು ಅನುಭವಿಸಿ ತದನಂತರ 'ಹಾಸ್ಯೋತ್ಸವ'ದ ಹೊನಲಿನಲ್ಲಿ ಮಿಂದು ಹಾಯಾಗಿ ಸ್ವಗೃಹಕ್ಕೆ ಬಂದು ನೆಲಸಿದ್ದ ನನ್ನ ಕಣ್ಮಣಿಗೆ ಹೊರ ಊರಿನಲ್ಲಿ ನಾನು ಅನುಭವಿಸಿದ ಕಷ್ಟಾವ್ಯಸನಗಳ ಬಗ್ಗೆ ನಾನು ನೀಡುತ್ತಿದ್ದ ವಿವರಗಳ ಬಗ್ಗೆ ಆಸಕ್ತಿಯೇ ಇರಲಿಲ್ಲ. ಸ್ವಲ್ಪ ಹೊತ್ತಿನಲ್ಲೇ ಅವಳು 'ಹಾಸ್ಯೋತ್ಸವ'ದ ರನಿಂಗ್ ಕಾಮೆಂಟರಿ ಪ್ರಾರಂಭಿಸಿದಾಗ ವಿಧಿಯಿಲ್ಲದೆ ಹಾಸ್ಯೋತ್ಸವವನ್ನು ಮಿಸ್ ಮಾಡಿಕೊಂಡಿದ್ದ ನನ್ನ ಅಂತರಂಗ ನನ್ನ ಮಿಸೆಸ್‌ನ

ವಾಗ್ಝರಿಗೆ ಮುಗ್ಧವಾಗಿ ಪುಳಕಿತಗೊಂಡು, ಆ ರೀತಿಯಲ್ಲಾದರೂ ಹಲವು ಹಾಸ್ಯದ ತುಣುಕುಗಳನ್ನು ಆಸ್ವಾದಿಸುವ ಸಲುವಾಗಿ ಕೇಂದ್ರೀಕೃತವಾಯಿತು. ನಿರರ್ಗಳವಾಗಿ ನಡೆಯುತ್ತಿದ್ದ ಅವಳ ವ್ಯಾಖ್ಯಾನದಿಂದಾಗಿ ನನಗೆ ನಾಡಿಗೇರ ಕೃಷ್ಣರಾಯರ ಮತ್ತು ಪಾವೆಂ ರವರ ಸ್ಮರಣೆಯ ಕಾರ್ಯಕ್ರಮದಿಂದ ಪ್ರಾರಂಭವಾಗಿ ಅಂದು ಹರಿದು ಪ್ರವಹಿಸಿದ ಹಾಸ್ಯ ಪ್ರಭುತಿಗಳ ಪ್ರತಿ ಹಾಸ್ಯ ಧಾರೆಯ ಸೂಕ್ಷ್ಮ ಪರಿಚಯ ಕಣ್ಣುಮುಂದೆ ನಡೆದಷ್ಟು ನಿಕಟವಾಗಿ ಆಯಿತು. ನನ್ನವಳ ವ್ಯಾಖ್ಯಾನದಲ್ಲಿ ಆಗೊಮ್ಮೆ ಈಗೊಮ್ಮೆ ಭಾಷಣಕಾರರು ಸಭಿಕರ ಸುಪ್ತ ಹಾಸ್ಯ ಚೇತನವನ್ನು ಪ್ರಚೋದಿಸಲು ಒಡ್ಡುತ್ತಿದ್ದ ಸಮಸ್ಯೆಗಳ ಚಕಮಕಿಯನ್ನು ನನ್ನವಳು ನನ್ನ ಮುಂದೆಯೂ ಒಡ್ಡಿ, ನಾನು ಅದಕ್ಕೆ ಪರಿಹಾರ ಹೊಳೆಯದೆ ತಿಣಕಾಡಲು ಪ್ರಾರಂಭಿಸಿದಾಗ ಕಡೆಯಲ್ಲಿ ಭಾಷಣಕಾರರೇ ಒದಗಿಸುತ್ತಿದ್ದ ಹಾಸ್ಯ ಪೂರ್ತಿ ಪರಿಹಾರವನ್ನು ತಾನೇ ಕಂಡುಹಿಡಿದುದಕ್ಕಿಂತಲೂ ಹೆಚ್ಚಿನ ಆಸಕ್ತಿಯಿಂದ ನನಗೆ ಒದಗಿಸುತ್ತಿದ್ದಳು. ವೃತ್ತಿಯಲ್ಲಿ ಹೈಸ್ಕೂಲಿನ ಮಕ್ಕಳಿಗೆ ಗಣಿತದ ಮೇಡಂ ಆಗಿರುವ ಆಕೆ ಹಾಸ್ಯೋತ್ಸವದಲ್ಲಿ ಮುಖ್ಯಮಂತ್ರಿ ಚಂದ್ರುವಿನ 'ನಗೆ ವೈವಿಧ್ಯ' ಭಾಷಣದ ಸಂದರ್ಭದಲ್ಲಿ ಅವರು ಸಭಿಕರಿಗೆ ನೀಡಿದ ಮೂರಳತೆಯ ಬಿಡಿಎ ನಿವೇಶನದ ಸಮಸ್ಯೆಯನ್ನು ಕುರಿತ ಹಾಸ್ಯ ಅವಳು ತನ್ನ ಗಮನಕ್ಕೆ ತಂದ ರೀತಿ ಹೀಗಿತ್ತು.

'ಸಾಮಾನ್ಯವಾಗಿ ಯಾವುದೇ ನಿವೇಶನದ ಅಳತೆಯನ್ನು ಸೂಚಿಸುವಾಗ ಅದರ ಉದ್ದ, ಅಗಲ ಮತ್ತು ಒಟ್ಟು ಚದರ ಅಳತೆಯ ವಿವರಗಳನ್ನು ತಾನೆ ಕೊಡುವುದು ಆದರೆ ಮುಖ್ಯಮಂತ್ರಿ ಚಂದ್ರುವಿಗೆ ನೀಡಿದ ಬಿಡಿಎ ನಿವೇಶನದ ಅಳತೆಯಲ್ಲಿ ಉದ್ದ, ಅಗಲದ ಜೊತೆಗೆ ಮೂರನೇ ಒಂದು ಅಳತೆಯನ್ನೂ ನೀಡಿದ್ದು ಅವರಿಗೆ ಅದು ಯಾವ ಅಳತೆ ಇರಬಹುದು ಎಂಬುದರ ಬಗ್ಗೆ ಸಮಸ್ಯೆಯನ್ನುಂಟುಮಾಡಿತಂತೆ. ''ಆ ಮೂರನೇ ಅಳತೆ ಯಾವುದಿರಬಹುದು ಹೇಳಿ?'' ಎಂದು ಆ ಸಮಸ್ಯೆಯನ್ನು ನನ್ನಾಕೆ ನನ್ನ ಮುಂದೆ ಒಡ್ಡಿದಳು. ವೃತ್ತಿಯಲ್ಲಿ ಇಂಜಿನಿಯರಾಗಿ ನಿವೃತ್ತಿ ಹೊಂದಿದ ನಂತರ ಸ್ಕೂಲ್ ಮಕ್ಕಳಿಗೆ ಗಣಿತ ಪಾಠ ಬೋಧಿಸುವ ಪ್ರವೃತ್ತಿಯನ್ನು ಬೆಳೆಸಿಕೊಂಡಿದ್ದ ನನಗೆ ಈ ಸಮಸ್ಯೆ ಒಂದು ಕ್ಲಿಷ್ಟ ಸಮಸ್ಯೆ ಎಂದು ಅನ್ನಿಸಲೇ ಇಲ್ಲ. ಆದ್ದರಿಂದ ಆ ಪ್ರಶ್ನೆಗೆ ನನ್ನಿಂದ ಸಾಫ್‌ಸೀದ ಉತ್ತರ ಬಂತು ''ನೀನು ಬಿಡಿಎ ನಿವೇಶನಗಳ ಬಗ್ಗೆ ವೃತ್ತ ಪತ್ರಿಕೆಗಳಲ್ಲಿ ಬರುವ ಜಾಹಿರಾತನ್ನು ನೋಡಿಲ್ಲ ಎನ್ನುವುದು ಇದರಿಂದ ಸಾಬೀತಾಯಿತು ಬಿಡು. ಬಿಡಿಎ ಪ್ರಕಟಿಸುವ ಮುಕ್ಕಾಲು ಮೂರು ಪಾಲು ನಿವೇಶನಗಳ ಜಾಹಿರಾತಿನಲ್ಲೆಲ್ಲಾ ಆ ನಿವೇಶನಗಳ ಉದ್ದದಲ್ಲೋ ಅಗಲದಲ್ಲೋ ಕೋನೆಯಾಗಿದ್ದು ಅದರ ಪ್ರಾರಂಭದ ಅಳತೆಗೂ ಮತ್ತು ಮುಕ್ತಾಯದ ಅಳತೆಗೂ ಬಹಳಷ್ಟು

ವ್ಯತ್ಯಾಸವಿರುತ್ತದೆ. ಅದರಿಂದಾಗಿ ಆ ಕೋನೆ ಅಳತೆಯ ಪ್ರಾರಂಭ ಮತ್ತು ಮುಕ್ತಾಯ ಎರಡೂ ಅಳತೆಗಳನ್ನೂ ಜಾಹಿರಾತಿನಲ್ಲಿ ಮುರಾಪಟ್ಟಿ ಅಳತೆಯನ್ನಾಗಿ ನೀಡಿ ನಿವೇಶನದ ಬಗ್ಗೆ ಆಸಕ್ತಿ ಇರುವವರು ಆ ಅಳತೆಗಳನ್ನು ಕೂಡಿಕೊಂಡು ಅದರ ಸರಾಸರಿಯನ್ನು ಕಂಡುಹಿಡಿದು, ಪ್ರತಿ ಚದರ ಅಡಿಗೆ ನಿಗದಿ ಮಾಡಿರುವ ದರದಲ್ಲಿ ಲೆಕ್ಕಿಸಿ ಹಣವನ್ನು ಕಟ್ಟುವುದಕ್ಕೆ ಅದರಲ್ಲಿ ಸೂಚನೆ ಇರುತ್ತದೆ. ಹಲವು ವಿಶೇಷ ಸಂದರ್ಭಗಳಲ್ಲಿ ಉದ್ದಗಲಗಳೆರಡೂ ಕೋನೆಯಾಗಿದ್ದ ಪಕ್ಷದಲ್ಲಿ ನಾಲ್ಕು ಅಳತೆಗಳನ್ನು ಒಂದೇ ನಿವೇಶನದಲ್ಲಿ ತೋರಿಸಿರುವ ಸಾಧ್ಯತೆಗಳೂ ಇರುತ್ತವೆ ಎಂದು ಉತ್ತರ ನೀಡಿ ನಿವೇಶನಗಳ ವಿಲೇವಾರಿಯಲ್ಲಿ ಸರ್ವೇಸಾಮಾನ್ಯದ ಸಂಗತಿಯಾದ ಇದು ಸಮಸ್ಯೆಯೇ ಅಲ್ಲ ಎನ್ನುವ ರೀತಿಯಲ್ಲಿ ನನ್ನ ಉದಾಸೀನತೆಯನ್ನು ವ್ಯಕ್ತಪಡಿಸಿದೆ.

''ಅದೇ ನೋಡಿ ನಿಮ್ಮ ಬುದ್ಧಿವಂತಿಕೆ! ನೀವು ಹೇಳಿದ್ದರಲ್ಲಿ ಏನಿದೆ ಜೋಕು? ಆದರೆ ಮುಖ್ಯಮಂತ್ರಿ ಚಂದ್ರು ಹೇಳಿದ ಜೋಕು ಏನು ಗೊತ್ತಾ? (ಗೊತ್ತಿಲ್ಲವೆಂಬಂತೆ ತಲೆ ಅಲ್ಲಾಡಿಸಿದೆ) ಅವರಿಗೆ ನೀಡಿದ ನಿವೇಶನದ ಉದ್ದ, ಅಗಲಗಳು ಸರಿಯಾಗಿಯೇ ಇದ್ದು ಅವರಿಗೆ ನೀಡಿದ ಚದರ ಅಳತೆಗೆ ತಾಳೆಯಾಗುತ್ತಿದ್ದವಂತೆ. ಅದರಿಂದಾಗಿಯೇ ಅವರಿಗೆ ಮೂರನೇ ಅಳತೆಯಾದ 15 ಅಡಿ ಏನಿರಬಹುದು ಎನ್ನುವುದರ ಬಗ್ಗೆ ಕುತೂಹಲ ಉಕ್ಕಿ ಬಂದದ್ದು. ಅದರ ಪರಿಹಾರಕ್ಕಾಗಿ ಅವರು ನಿವೇಶನಕ್ಕೆ ಭೇಟಿ ನೀಡಿದಾಗ ಮೊದಲ ನೋಟಕ್ಕೆ ಅವರಿಗೆ ದೂರದಿಂದ ನಿವೇಶನದ ಅಳತೆಯಲ್ಲಿ ಯಾವ ರೀತಿಯ ನ್ಯೂನತೆಗಳೂ ಕಂಡುಬರಲಿಲ್ಲವಂತೆ. ಆದರೆ ಅವರು ನಿವೇಶನವನ್ನು ಸಮೀಪಿಸಿ ಅದನ್ನು ಪ್ರವೇಶಿಸುತ್ತಿದ್ದಂತೆಯೇ ಅದರ ಮಧ್ಯದಲ್ಲಿದ್ದ, ದೂರದಿಂದ ನೋಡುವಾಗ ಅಗೋಚರವಾಗಿದ್ದ, ಸುಮಾರು 15 ಅಡಿ ಆಳದ ಪ್ರದೇಶವಿರುವುದು ಕಂಡುಬಂದಿತಂತೆ, ಈಗ ಅವರು ಅದನ್ನು ಹೇಗೆ ಉಪಯೋಗಿಸಿಕೊಳ್ಳಬೇಕೆಂಬ ಸಮಸ್ಯೆಗೆ ಪರಿಹಾರ ಹುಡುಕುತ್ತಿದ್ದು, ರಾಜ್ಯದ ನಿಜವಾದ ಮುಖ್ಯಮಂತ್ರಿಗಳನ್ನು ಸಂಪರ್ಕಿಸಿ ಆ ನಿವೇಶನದ ಉಪಯೋಗಕ್ಕಾಗಿ ಒಂದು ಏಣಿಯನ್ನು ಮಂಜೂರು ಮಾಡಬೇಕೆಂದು ಅಹವಾಲನ್ನು ನೀಡುತ್ತಾರಂತೆ ಎಂದು ವಿವರಣೆ ನೀಡಿದಾಗ ನಿವೇಶನದ ಸಮಸ್ಯೆ ಮತ್ತು ಪರಿಹಾರಗಳ ಮಧ್ಯೆ ಅಡಗಿದ್ದ ಅಣಕವನ್ನು ನಾನು ಮೆಚ್ಚುವುದರ ಜೊತೆಗೆ ಹಾಸ್ಯದ ಬಹುಮುಖ ಪ್ರತಿಭೆಯ ಬಗ್ಗೆ ನನ್ನ ಮನಸ್ಸಿನಲ್ಲಿ ಒಂದು ವಿಚಾರ ಸರಣಿಯ ಬುಗ್ಗೆಯೇ ಎದ್ದು ನನ್ನಲ್ಲಿನ ಸ್ಫೂರ್ತಿಯನ್ನು ಕೆರಳಿಸಿದ ಅನುಭವವಾಯಿತು ಮನೆಯ ಕೆಲಸಗಳಲ್ಲಿ ತಲ್ಲೀನಳಾಗಿ ಅದರೊಂದಿಗೆ ಹಾಸ್ಯೋತ್ಸವದ ವ್ಯಾಖ್ಯಾನವನ್ನೂ ನೀಡುತ್ತಾ ಮುಂದುವರೆದಿದ್ದ ನನ್ನವಳ ಮಾತುಕತೆಗಳಿಗೆ ನನ್ನ ಅಭಿಪ್ರಾಯಗಳನ್ನೂ ಆಗಾಗ್ಗೆ ವ್ಯಕ್ತಪಡಿಸುತ್ತಾ,

ಹಾಸ್ಯೋತ್ಸವದ ಸಂದರ್ಭದಲ್ಲಿ ನೀಡಿದ ಕರಪತ್ರಗಳತ್ತ ದೃಷ್ಟಿ ಹಾಯಿಸುತ್ತಾ ಕಾಲ ಕಳೆಯುತ್ತಿದ್ದ ನನಗೂ ಅದುವರೆವಿಗೂ ಕಳೆದ ಸಮಯದ ಪ್ರಜ್ಞೆಯೇ ಇರಲಿಲ್ಲ. ಅಷ್ಟರಲ್ಲಿ ಇದ್ದಕ್ಕಿದ್ದಂತೆ ಒಂದು ಕರಪತ್ರದಲ್ಲಿದ್ದ ವಿಷಯ ನನ್ನ ಗಮನವನ್ನು ಹೆಚ್ಚಾಗಿ ಸೆಳೆದುದರ ಪರಿಣಾಮವಾಗಿ ನಾನು ಅವಳ ವ್ಯಾಖ್ಯಾನಕ್ಕೆ ನೀಡುತ್ತಿದ್ದ ಪ್ರಾಮುಖ್ಯತೆಗೆ ಚ್ಯುತಿ ಒದಗಿದ್ದರಿಂದಲೋ ಏನೋ ಅವಳು ಕೋಪದಿಂದ ''ನಿಮಗೆ ಇಷ್ಟವಿಲ್ಲದಿದ್ದರೆ ಬಿಡಿ, ನಾನ್ಯಾಕೆ ಕೋಣನ ಮುಂದೆ ಕಿಂದರಿ ಬಾರಿಸಿದ ಹಾಗೆ ಅಲ್ಲಿ ನಡೆದದ್ದೆನ್ನೆಲ್ಲಾ ಹೇಳುತ್ತಾ ನನ್ನ ಬಾಯಿ ನೋಯಿಸಿಕೊಳ್ಳಲಿ, ನಿಮ್ಮಂತಹವರಿಗೆ ಏನಾದರೂ ಹಾಸ್ಯಪ್ರಜ್ಞೆ ಇದ್ದರೆ ಸರಿ'' ಎಂದು ಇನ್ನೂ ಏನೇನ್ನೋ ಒದರುತ್ತಾ ಇದುವರೆವಿಗೂ ಸುಲಲಿತವಾಗಿ ಹರಿಯುತ್ತಿದ್ದ ಹಾಸ್ಯಧಾರೆಯನ್ನು ಇದ್ದಕ್ಕಿದ್ದಂತೆ ಮೊಟಕುಗೊಳಿಸಿದಳು. ಆದರೂ ಅವಳ ನಿಂದನೆಗಳೂ ಮತ್ತು ಅವಳು ಹಠಾತ್ತನೆ ನಿಲ್ಲಿಸಿದ ಹಾಸ್ಯವ್ಯಾಖ್ಯಾನ ಮುಂತಾದವೂ ನನ್ನ ಪರಿವೆಗೆ ಬರದಷ್ಟು ಗಾಢವಾಗಿ ಆ ಕರಪತ್ರದಲ್ಲಿದ್ದ ಒಂದು ಒಕ್ಕಣೆಯಿಂದ ನಾನು ಪ್ರಭಾವಿತನಾಗಿದ್ದೆ. ನನಗೆ ತಿಳುವಳಿಕೆ ಬಂದಂದಿನಿಂದಲೂ ಯಾವುದಾದರೂ ವಿಶೇಷ ವಿಷಯ ನನ್ನ ಗಮನಕ್ಕೆ ಬಂದರೆ ಅದನ್ನು ತಾರ್ಕಿಕವಾಗಿ ವಿವೇಚಿಸುವ ಹವ್ಯಾಸವನ್ನು ಬೆಳೆಸಿಕೊಂಡು ಬಂದಿರುವ ನನಗೆ ಆ ಕರಪತ್ರದಲ್ಲಿನ ಒಂದು ವಿನೋದಕರ ಅಂಶ ನನ್ನ ಗಮನವನ್ನು ಸೂಜಿಗಲ್ಲಿನಂತೆ ತಟಕ್ಕನೆ ಅದರತ್ತ ಸೆಳೆದಿತ್ತು. ಅದು ಒಂದು ಅಗೋಚರ (abstract) ಗಣಿತಕ್ಕೆ ಸಂಬಂಧಿಸಿದ ಸಮಸ್ಯೆಯಂತೆ ನನ್ನ ತಾರ್ಕಿಕ ಬುದ್ಧಿಗೆ ಸವಾಲು ನೀಡುತ್ತಿದ್ದ ಅನುಭವ ನನಗಾಗ ಹತ್ತಿತ್ತು. ಅಷ್ಟರಲ್ಲಿ ನನ್ನ ನಿಂದನೆಯ ಸ್ಥಾವರಕ್ಕೆ ಇಳಿದಿದ್ದ ನನ್ನವಳನ್ನು ಚುಡಾಯಿಸುವ ಮನಸ್ಸಾಗಿ ನನ್ನ ಸಮಸ್ಯೆಯನ್ನು ಹಾಸ್ಯೋತ್ಸವದ ಸ್ಥಾವರಕ್ಕೆ ಹೊಂದಿಸುವ ಚಾಕಚಕ್ಯತೆಯನ್ನು ತೋರಿಸುತ್ತಾ 'ಯಾಕೆ ಕೋಪ ಮೇಡಂ. ಇಲ್ಲಿ ನೋಡಿ ನೀವು ಈಗ ಸ್ವಲ್ಪ ಹೊತ್ತಿಗೆ ಮುಂಚೆ ಕೇಳಿದಿರಲ್ಲ ಬಿಡಿಎ ನಿವೇಶನದ ಸಮಸ್ಯೆ. ಅದಕ್ಕೆ ಸರಿಸಮನಾದ ಸಮಸ್ಯೆ ಹಾಸ್ಯೋತ್ಸವದ ಈ ಕರಪತ್ರದಲ್ಲಿಯೇ ಇದೆ ನೋಡಿ. ತಾಕತ್ತಿದ್ದರೆ ಈ ಸಮಸ್ಯೆಯನ್ನು ಬಿಡಿಸಿ ನೋಡೋಣ' ಎಂದು ಅವಳಿಗೆ ಮರು ಸವಾಲು ಹಾಕಿದೆ. ನನ್ನ ಚಂಚಲ ಮನೋಭಾವವನ್ನು ಟೀಕಿಸಿದ್ದ ಅವಳನ್ನು ಹಠಾತ್ತನೆ ಹಾಸ್ಯೋತ್ಸವದ ಸನ್ನಿವೇಶಕ್ಕೆ ಮರುಕಳಿಸುವ ನನ್ನ ಅಸ್ತ್ರದಿಂದ ಕಂಗಾಲಾದ ಅವಳು ನಾನು ಹೇಳ ಹೊರಟಿದ್ದ ವಿಷಯದ ಬಗ್ಗೆ ಆಸಕ್ತಿ ತೋರಿಸದೇ ವಿಧಿಯೇ ಇರಲಿಲ್ಲ. ಆದರಿಂದಾಗಿ ನನ್ನ ವ್ಯಾಖ್ಯಾನ ಯಾವ ಅಡ್ಡಿ ಆತಂಕಗಳೂ ಇಲ್ಲದೆ ಮುಂದುವರೆಯಲು ಅನುಕೂಲವಾದ ವಾತಾವರಣ ತಕ್ಷಣವೇ ಉಂಟಾಗಿ ನಾನು ಹೇಳಲುಪಕ್ರಮಿಸಿದೆ. ಆ ಕರಪತ್ರದಲ್ಲಿನ ವಿಷಯದಿಂದಾಗಿ ಉದ್ಭವಿಸಿದ್ದ

ಸಮಸ್ಯೆಯನ್ನು ಅವಳಿಗೆ ಸವಿವರವಾಗಿ ನೀಡಿದ್ದಾಗ್ಯೂ ಅಂದಿನಿಂದ ಇಂದಿನವರೆಗೂ ಆ ಸಮಸ್ಯೆಗೆ ಯಾವುದೇ ರೀತಿಯ ಪರಿಹಾರ ದೊರೆಯದ ಕಾರಣ ಈಗ ಆ ಸಮಸ್ಯೆಯನ್ನು ಹಾಸ್ಯೋತ್ಸವದಲ್ಲಿ ಭಾಗವಹಿಸಿದವರ ಮತ್ತು 'ಅಪರಂಜಿ'ಯ ಮತ್ತಿತರ ಓದುಗರ ಗಮನಕ್ಕೂ ಈ ಲೇಖನದ ಮೂಲಕ ತರುವ ಪ್ರಯತ್ನ ಮಾಡಿದ್ದೇನೆ. ಆ ಸಮಸ್ಯೆಯ ಸಂಕ್ಷಿಪ್ತ ವಿವರಣೆ ಈ ಕೆಳಕಂಡಂತಿದೆ.

ಹಾಸ್ಯೋತ್ಸವದ ಸಂದರ್ಭದಲ್ಲಿ ಬಿಡುಗಡೆಯಾದ ಪುಸ್ತಕಗಳ ಬಗ್ಗೆ ಹೊರಡಿಸಿದ್ದ ಒಂದು ಕರಪತ್ರಕ್ಕೆ ಸಂಬಂಧಿಸಿದ್ದು ಈ ಸಮಸ್ಯೆ ಆ ಕರ ಪತ್ರದ ಪ್ರಕಾರ ಅಂದು ಬಿಡುಗಡೆಯಾದ ಐದು ಪುಸ್ತಕಗಳಿಗೆ ಪ್ರತಿಯೊಂದು ಪುಸ್ತಕಕ್ಕೂ ಅದರ ಮುಖ ಬೆಲೆಗೆ ಬದಲಾಗಿ ಅಂದು ಕೊಳ್ಳುವವರಿಗೆ ಅನ್ವಯಿಸುವ ಒಂದು ರಿಯಾಯಿತಿ ಬೆಲೆಯನ್ನು ನಮೂದಿಸಲಾಗಿತ್ತು. ಅದರಂತೆ ಐದೂ ಪುಸ್ತಕಗಳ ಮುಖ ಬೆಲೆಗಳಾದ (ರೂ. 70+ರೂ. 60+ರೂ. 45+ ರೂ. 50+ರೂ. 100) ಕ್ಕೆ ಬದಲಾಗಿ ಅವುಗಳನ್ನು ಕ್ರಮಶಃ (ರೂ. 60+ರೂ. 50+ ರೂ. 35+ ರೂ. 40+ ರೂ. 80) ರಿಯಾಯಿತಿ ದರದಲ್ಲಿ ನೀಡುವುದಾಗಿ ಆ ಹಸ್ತಪ್ರತಿಯಲ್ಲಿ ಪ್ರಕಟಿಸಲಾಗಿತ್ತು. ಅಂದರೆ ನಾವು ಐದೂ ಪುಸ್ತಕಗಳನ್ನು ಒಟ್ಟಿಗೆ ಕೊಂಡರೆ ರೂ. 325ಕ್ಕೆ ಬದಲಾಗಿ ರೂ. 265ಕ್ಕೆ ದೊರೆಯುವ ವ್ಯವಸ್ಥೆ ಆ ಕರಪತ್ರದಲ್ಲಿ ಕಾಣಿಸಿದ್ದು ಒಂದೊಂದು ಪುಸ್ತಕವೂ ಹಾಸ್ಯಾಸಕ್ತರ ದೃಷ್ಟಿಯಿಂದ ಒಂದು ಅಪೂರ್ವ ಪುಸ್ತಕವಾಗಿದ್ದುದರಿಂದ ಅವರು ಅಂದು ನೀಡುತ್ತಿದ್ದ ರಿಯಾಯಿತಿ ದರ ನಿಜಕ್ಕೂ ಸ್ವಾಗತಾರ್ಹ. ಆದರೆ ಆ ಕರಪತ್ರದ ಮುಖಪುಟದ ಕೆಳಭಾಗದಲ್ಲಿ ನೀಡಿದ್ದ ಒಂದು ವಿಶೇಷ ಸೂಚಿಕೆ ಮಾತ್ರ ಬೇರೆಡೆಗಳಲ್ಲಿ ನೀಡಿದ್ದ ಪುಸ್ತಕಗಳ ಬೆಲೆ ಮತ್ತು ರಿಯಾಯಿತಿ ದರಗಳಿಗೆ ಒಂದು ಸವಾಲಿನಂತಿತ್ತು ಅದರ ಒಕ್ಕಣೆ ಈ ರೀತಿ ಇತ್ತು.

> ಈ ಮೇಲಿನ ಐದೂ ಪುಸ್ತಕಗಳನ್ನು
> ಒಟ್ಟಿಗೆ ಕೊಂಡವರಿಗೆ ಇನ್ನೂರು ಪುಟಗಳ
> ''ನಮ್ಮ ಕೈಲಾಸಂ'' ಪುಸ್ತಕ ಉಚಿತ ಕೊಡುಗೆ.
> ಒಟ್ಟು ಆರೂ ಪುಸ್ತಕಗಳ ರಿಯಾಯಿತಿ
> ಬೆಲೆ ರೂ. 300/-

ಈ ಪ್ರಕಟಣೆಯನ್ನು ಓದುತ್ತಿದ್ದಂತೆ ನನ್ನ ತಾರ್ಕಿಕ ತಲೆಯಲ್ಲಿ ಉದ್ಭವಿಸಿದ ಅಲ್ಲೋಲ ಕಲ್ಲೋಲ ಉಪಶಮನವಾಗುವುದು ಬಹುಶಃ ನನ್ನ ಈ ಕೆಳಗಿನ ಪ್ರಶ್ನೆಗಳಿಗೆ ಸರಿಯಾದ ಉತ್ತರ ದೊರೆತಂದು ಮಾತ್ರ. ದಯವಿಟ್ಟು ಅದರ ಉಪಶಮನಕ್ಕಾಗಿ ನನ್ನನ್ನು ಮುಂದಿನ ವರ್ಷದ ಹಾಸ್ಯೋತ್ಸವದವರೆಗೆ ಕಾಯಗೊಡದೆ ಆದಷ್ಟು ಬೇಗ ಓದುಗರಾಗಲೀ ಇಲ್ಲವೇ ಆ ಕರಪತ್ರವನ್ನು ಹೊರಡಿಸಿದ ಪುಸ್ತಕಗಳ ಪ್ರಕಾಶಕರಾಗಲೀ ನನಗೆ ಉತ್ತರ ಒದಗಿಸಿದಲ್ಲಿ ನಾನು ಅವರಿಗೆ ಚಿರ ಋಣಿ. ಅದಕ್ಕೆ ಸಂಬಂಧಪಟ್ಟಂತೆ ನನ್ನ ಪ್ರಶ್ನೆಗಳು ಈ ರೀತಿ ಇವೆ.

1. ಆರೂ ಪುಸ್ತಕಗಳನ್ನೂ ಒಟ್ಟಿಗೆ ಕೊಂಡವರಿಗೆ ಎನ್ನುವ ಉಕ್ತಿಯಲ್ಲಿ ತಪ್ಪು ಅಡಗಿರುವ ಆರನೇ ಪುಸ್ತಕ ಯಾವುದು?

2. ಐದೂ ಪುಸ್ತಕಗಳನ್ನು ಬಿಡಿಬಿಡಿಯಾಗಿ ಅವುಗಳ ರಿಯಾಯಿತಿ ದರದಲ್ಲಿ ಕೊಂಡಲ್ಲಿ ಅವು ನಮಗೆ ಕೇವಲ ರೂ. 265ಕ್ಕೆ ಲಭ್ಯ. ಹಾಗಿರುವಲ್ಲಿ ಒಟ್ಟಾಗಿ 300 ರೂಗೆ ಕೊಂಡಾಗ ದೊರೆಯುವ 'ಉಚಿತ' ಪುಸ್ತಕದ ರಿಯಾಯಿತಿ ಬೆಲೆಯೇನು?

3. ಒಂದು ಸಮಯ ಉಚಿತವಾಗಿ ದೊರೆಯುವ ಪುಸ್ತಕವೂ ರಿಯಾಯಿತಿ ದರದಲ್ಲಿ ಮಾರಾಟವಾಗುತ್ತಿದ್ದಲ್ಲಿ ಅದರ ಮುಖ ಬೆಲೆ ಏನು?

4. ಎಲ್ಲಕ್ಕೂ ಮುಖ್ಯವಾಗಿ ಮೂಲಭೂತ ಪ್ರಶ್ನೆ ಎಂದರೆ ಆ ಐದೂ ಪುಸ್ತಕಗಳನ್ನು ಅವುಗಳಿಗೆ ಸಲ್ಲುವ ರಿಯಾಯಿತಿ ದರದಲ್ಲಿ ರೂ. 265/- ನೀಡಿಕೊಂಡು ಒಂದು ಇನ್ನೂರು ಪುಟಗಳ ಪುಸ್ತಕವನ್ನು ಕೊಡುಗೆಯಾಗಿ ಪಡೆಯುವುದು ಉಚಿತವೋ, ಇಲ್ಲವೇ ಆರೂ ಪುಸ್ತಕಗಳನ್ನು ರೂ. 300 ರಿಯಾಯಿತಿ ಬೆಲೆಯಲ್ಲಿ ಪಡೆಯುವುದು ಉಚಿತವೋ?

('ಹಾಸ್ಯೋತ್ಸವ'ದ ಸಂದರ್ಭದಲ್ಲಿ ವಹಿವಾಟುಗಳಲ್ಲೂ ಹಾಸ್ಯ ಹೊಕ್ಕಿರಲು ಸಾಧ್ಯ ಎನ್ನುವುದನ್ನು ಪ್ರತಿಪಾದಿಸಲು ಬರೆದಿರುವ ಈ ಲೇಖನ ಯಾವುದೇ ವ್ಯಕ್ತಿ ಅಥವಾ ಸಂಸ್ಥೆಯನ್ನು ಟೀಕಿಸುವುದಕ್ಕಲ್ಲ ಎಂಬ ವಿಷಯದ ಬಗ್ಗೆ ಇಲ್ಲಿ ಒತ್ತಿ ಹೇಳಲಿಚ್ಛಿಸುತ್ತೇನೆ)

★★★

ಹರ..ಹರ..ಮಹಾದೇವ..!

– ಕೆ.ಬಿ. ವೀರಣ್ಣ ಕಣ್ಣಾಗಾಲ

ರಂಗಸ್ವಾಮಿಯ ಬದುಕು ಹೂವಿನ ಹಾಸಿಗೆ ಎಂದು ಎಷ್ಟೋ ಜನರು ಬಗೆದಿದ್ದಾರೆ. ಯಾಕೆಂದರೆ ಅವನು ಬ್ಯಾಂಕಿನಲ್ಲಿ ಕೆಲಸ ಮಾಡೋದು. ಬ್ಯಾಂಕಿನಲ್ಲಿ ಕೆಲಸ ಅಂದ್ರೆ ಕಂಡೋರ ದುಡ್ಡು ಕಾಯುವ ಕೆಲಸ ಅನ್ನೋದು ಇವರಿಗೆ ಏನು ಗೊತ್ತು?! ಅವನ ಕಷ್ಟ ಅವನಿಗೆ... ಜನರ ಸುಮಾನ ಜನರಿಗೆ. ರಂಗಸ್ವಾಮಿ ಹಣ ಬರಹವೋ ಅಥವಾ ಅವನು ಪ್ರಾಮಾಣಿಕನಾಗಿದ್ದ ತಪ್ಪಿಗೆ ಶಿಕ್ಷೆ ನೀಡುವ ಸಲುವಾಗಿಯೋ... ಇವನು ಇವನ ಮೇಲಧಿಕಾರಿಗಳ ಕಾಲಿಗೆ 'ಫುಟ್‌ಬಾಲ್' ಆಗಿ ಹೋಗಿದ್ದನು. ಅವರು ಒದೆಯುವ ಒಂದೊಂದು ಒದೆತಕ್ಕೆ ಇವನು ಶ್ರಮಿಸುತ್ತಿದ್ದ ದೂರ ಅಪಾರ! ಒಮ್ಮೆ ಒಂದೇ ಒದೆತಕ್ಕೆ ಬಿಜಾಪುರ ತಲುಪಿದ್ದನು. ಮತ್ತೆ ಅಲ್ಲಿಂದ ಇತ್ತ ಒದ್ದಾಗ ಕಾರವಾರ ಕಂಡನು. ಅಲ್ಲಿಂದ ಇನ್ನೊಂದು ಒದೆತ ಚಿತ್ರದುರ್ಗ...! ಹೀಗೆ... ಇವನು ತನ್ನ ಬದುಕಿನಲ್ಲಿ ಎಂದೂ ಫುಟ್‌ಬಾಲ್ ಆಡದ ತಪ್ಪಿಗೆ ಶಿಕ್ಷೆಯೇನೋ ಎನ್ನುವಂತೆ... ಇವನೇ ಅವರಿಗೆ 'ಫುಟ್‌ಬಾಲ್' ಆಗಿಹೋದನು. 'ಕೆಲಸ ಮಾಡುವವನಿಗೆ ಯಾವ ಊರು ಆದರೆ ಏನಂತೆ...?' ಎನ್ನುವ ಧಿಮಾಕು ಬೇರೆ. ಮೇಲಧಿಕಾರಿಗಳಿಗೆ ಎದುರು ಮಾತನಾಡುತ್ತ ಸತ್ಯ ಧರ್ಮ ಎಂದು ವಾದಿಸುತ್ತ ಅವರ ವಕ್ರ ದೃಷ್ಟಿಗೆ ತಾನೇ ತಾನಾಗಿ ಬಲಿಯಾಗುವುದು ಇವನ ದೌರ್ಬಲ್ಯಗಳಲ್ಲಿ ಒಂದು. ಬದುಕಿನಲ್ಲಿ ಬರೀ ಕಹಿಯಷ್ಟೆ ಇರುವುದಿಲ್ಲ ಸಿಹಿಯೂ ಮೇಳೈಸುವುದು ಎನ್ನುವುದಕ್ಕೆ ಬೇಕಾದಷ್ಟು ಉದಾಹರಣೆಗಳಿವೆ.

ಬ್ಯಾಂಕಿನಲ್ಲಿ ಫೀಲ್ಡ್ ಆಫೀಸರ್ ಆದ ಇವನಿಗೆ ಸದಾ ಫೀಲ್ಡಿನಲ್ಲಿಯೆ ಕೆಲಸ ಎಂದು ನೀವು ತಿಳಿಯಬಾರದು. ಆಗಾಗ್ಗೆ ಬ್ಯಾಂಕಿನಲ್ಲಿಯೂ ಸಿಗುತ್ತಾನೆ. ನೀವು ಹಿಂದೊಮ್ಮೆ ಹೈಸ್ಕೂಲಿನ ವಿದ್ಯಾರ್ಥಿ ಆಗಿದ್ದಾಗ... ಇತಿಹಾಸ ಕಡು ಕಷ್ಟವಾಗಿತ್ತೆ...? ಕಷ್ಟ ಆಗಿರಲೇಬೇಕು, ಇತಿಹಾಸ ಅಂದಾಕ್ಷಣ... ಅದರಲ್ಲಿ ಬರುವ ಒಂದೇ ತೆರನಾದ ಹೆಸರುಗಳು ಕ್ಷಣ ಕ್ಷಣಕ್ಕೂ ತಿಳಿಸಾರಿನಲ್ಲಿ ಜಿರಳೆ ಸಿಕ್ಕಂತೆ ಬರುವ ಇಸವಿಗಳು ಯಾರಿಂದ ತಾನೆ ನೆನಪಿಡಲು ಸಾಧ್ಯ?! ರಂಗಸ್ವಾಮಿ ಇತಿಹಾಸದಲ್ಲಿ ಪುಲಿಕೇಶಿ I, ಪುಲಿಕೇಶಿ II, ಕೃಷ್ಣರಾಜ ಒಡೆಯರ್ I, II, III, IV ಈ ರೀತಿಯ ಒಂದೇ ಹೆಸರಿನ ಸರಣಿ ನೋಡಿ ಸಗಣಿ ತಿಂದವನಂತೆ ಮುಖ ಮಾಡುತ್ತಿದ್ದನು. ಇತಿಹಾಸ ವಿಷಯದಲ್ಲಿ ಉತ್ತೀರ್ಣನಾಗಲು ಭಗೀರಥ ಪ್ರಯತ್ನವನ್ನೇ ಪಟ್ಟಿದ್ದನು. ಈಗ ಮತ್ತದೇ ಅನುಭವವಾಗತೊಡಗಿತು.

ರಂಗಸ್ವಾಮಿಗೆ ಹಳೆಯ ಮೈಸೂರಿನ ಕೊಳ್ಳೇಗಾಲಕ್ಕೆ ವರ್ಗವಾಗಿತ್ತು. ಇವನು ಬ್ಯಾಂಕಿನ ಲೆಡ್ಜರ್ ತೆಗೆದು ಸಾಲಗಾರರ ಹೆಸರನ್ನು ತಿರುಗಿಸುತ್ತ ಹೋದನು. ಆಗ ಅವನಿಗೆ ಅಚ್ಚರಿ ಕಾದಿತ್ತು. ಲೆಡ್ಜರ್‌ನ ಯಾವ ಪುಟ ತಿರುಗಿಸದರು 'ಮಹಾದೇವ' ಎನ್ನುವ ಹೆಸರೇ ಪ್ರತ್ಯಕ್ಷವಾಗತೊಡಗಿತು. ರಂಗಸ್ವಾಮಿ ತನ್ನ ಕಣ್ಣುಗಳನ್ನು ಉಜ್ಜಿಕೊಂಡು ಮತ್ತೊಮ್ಮೆ ನೋಡಿದನು. ಆ ಹೆಸರುಗಳೇನು ಬದಲಾಗಿರಲಿಲ್ಲ. ಎಲ್ಲೆಲ್ಲಿಯೂ ಮಹಾದೇವ.. ಮಹಾದೇವ ಎಂದೇ ಇದ್ದುದು ಕಂಡು ತಲೆ ಪರಚಿಕೊಂಡನು. ಇವರನ್ನು ಗುರುತಿಸುವ ಬಗೆ ಹೇಗೆ...? ಸಾಲಗಾರರನ್ನು ಕಂಡು ಹಿಡಿಯುವ ಬಗೆ ಹೇಗೆ ಎನ್ನುವುದೇ ಅವನಿಗೆ ಚಿಂತೆ ಆಯಿತು.

ಜೀಪ್ ಡ್ರೈವರ್ ಅಬ್ದುಲ್ಲನೊಟ್ಟಿಗೆ ಪಕ್ಕದ ಹಳ್ಳಿಯೊಂದಕ್ಕೆ ಸಾಲ ವಸೂಲಿಗೆ ಹೊರಟನು. ಹಳ್ಳಿ ಪ್ರವೇಶಿಸಿದಾಕ್ಷಣ ಒಂದಷ್ಟು ಹಳ್ಳಿ ಹೈಕಳು ಬಂದು ಜೀಪನ್ನು ಸುತ್ತುವರೆದರು. ರಂಗಸ್ವಾಮಿಗೆ ತನ್ನ ಕಾರ್ಯವನ್ನು ಎಲ್ಲಿಂದ ಹೇಗೆ ಪ್ರಾರಂಭಿಸಬೇಕೆನ್ನುವುದೇ ಕಠಿಣವಾಯಿತು. ಜೀಪಿನ ಹತ್ತಿರ ನಿಂತಿದ್ದ ಓರ್ವ ಹಳ್ಳಿಯ ರೈತನನ್ನು ಕಂಡು ''ಏನಪ್ಪಾ... ಬಾ ಇಲ್ಲಿ.... ನಿನ್ನ ಹೆಸರೇನು...?'' ಎಂದನು. ಆ ರೈತ ಅನುಮಾನದಿಂದ ಇವನನ್ನೇ ನೋಡುತ್ತ ''ಯಾಕ್ಸಾಮಿ...? ನನ್ನ ಹೆಸ್ರು ಮಹಾದೇವ'' ಎಂದನು. ರಂಗಸ್ವಾಮಿಗೆ ಮತ್ತೆ ತಲೆ ಪರಚಿಕೊಳ್ಳುವ ಹಾಗೆ ಆಯಿತು. ''ಸರಿ ಇಲ್ಲಿ ನಮ್ಮ ಬ್ಯಾಂಕಿನಿಂದ ಇಪ್ಪತ್ತು ಜನ ಸಾಲ ತಗೊಂಡಿದ್ದಾರೆ ಸ್ವಲ್ಪ ತೋರಿಸ್ತೀಯ...?'' ಎನ್ನುತ್ತಿರುವಾಗಲೆ ಮತ್ತೆ ನಾಲ್ಕೈದು ಜನರ ಗುಂಪೊಂದು ಜೀಪು ನಿಂತಿದ್ದ ಕಡೆ ಬಂದಿತು. ನೋಡಿ ಸೋಮಿ... ಇಲ್ಲಿ ಬಂದಿರೋರೆಲ್ಲಾ ನಿಮ್ಮ ಬ್ಯಾಂಕಿನಲ್ಲಿ ಸಾಲ ತಗೊಂಡಿರೋರೆ ವಿಚಾರಿಸಿಕೊಳ್ಳಿ ಎಂದು ಹೇಳಿ ಕಂಬಿ ಕಿತ್ತನು. ಅಲ್ಲಿ ಬಂದವರಲ್ಲಿ ಒಬ್ಬನನ್ನು ಕುರಿತು ''ನಿನ್ನ ಹೆಸ್ರೇನು?'' ಎಂದು ಕೇಳಿದನು.

''ಮಹಾದೇವ''

''ನಿಮ್ಮ ಅಪ್ಪನ ಹೆಸರು?''

''ಮಹಾದೇವ!''

ಅವನನ್ನು ಬಿಟ್ಟು ಮತ್ತೊಬ್ಬನನ್ನು ಮತ್ತದೇ ಪ್ರಶ್ನೆಗಳು ರಿಪೀಟ್ ಆದವು. ಉತ್ತರಗಳು ಅವೇ ರಿಪೀಟ್ ಆಯಿತು. ರಂಗಸ್ವಾಮಿ ಸಿಟ್ಟಿನಿಂದ ರೇಗುತ್ತ ''ಊರಿನವ್ರೆಲ್ಲಾ... ಹಿಂಗೆ ಒಂದೇ ಹೆಸರು ಇಟ್ಟುಕೊಂಡು ಬಿಟ್ರೆ... ನಮ್ಮಂತಹವರ ಗತಿ?'' ಎಂದನು ಗೋಳಾಡುತ್ತ!

ನಮ್ ಗುಂಡನ ಟ್ರಾನ್ಸ್‌ಫರ್ ಪ್ರಸಂಗ

– ವಿಜಯ ಸಚ್ಚಿದಾನಂದ

ನಮ್ಮ ಗುಂಡನಿಗೆ ದಿಲ್ಲಿಯಿಂದ ಗೌಹಾತಿಗೆ transfer ಆಯ್ತೂ ಅನ್ನೊ ಸುದ್ದಿ ಕೇಳಿ ಅವನತ್ತೆ ಲಬೊ ಲಬೋಂತ ಬಾಯಿ ಬಡ್ಕೊಂಡ್ಬಿಟ್ಳಂತೆ! ಅಷ್ಟೇ ಅಲ್ಲ! ತನ್ನ ಮಗಳು ಎಳೇ ಬಾಣಂತಿ - ಅವಳ ಕಿವಿಗೆ ಈ ಅನಿಷ್ಟ ಸುದ್ದಿನ ಹಾಕಲೇ ಬಾರದೂಂತ ಮನೇ ಮಂದಿಗೆಲ್ಲಾ ಕಾಕೀಕಿ ಬೇರೆ ಮಾಡಿಟ್ಳು. ಅಲ್ದೇ ಗುಂಡ ಆ ರೂಮು ಅಂದ್ರೆ ಬಾಣಂತಿ ರೂಮಿನ ಕಡೆ ಸುಳೀಲೂ ಬಾರದು ಅಂತ ಕಟ್ಟಾಜ್ಞೆ ಬೇರೆ ಹೊರಡಿಸಿದ್ಳು. ಅಲ್ಲೇ ಮಂಚದ ಮೇಲೆ ವಕ್ಕರಿಸಿತ್ತಲ್ಲಾ - 95ರ ಆ ಮುದುಕಿ ಅವನ ಅತ್ತೆಯ ಅತ್ತೆ ಅದ್ಬೇರೆ "ಅದಕ್ಕೇ ಕಣೆ ನರಸೂ! ನಾನು ಬಡ್ಕೊಂಡಿದ್ದೂ ಇವನ ಲಕ್ಷಣ ಸರಿಗಿಲ್ಲಾ! ನಮ್ಮ ಅರಗಿಣೀಂಥ ಮಗೂನ ಇವನ ಕೈಗೆ ಹಾಕ್ಬೇಡ ಅಂತ. ಈಗ್ನೋಡು ಏನ್ನಾಗೋಯ್ತು" ಅಂತ ಏನರ್ಥ ಆಯ್ತೋ ಬಿಡ್ತೋ ಬೋಡು ತಲೆ ಮೇಲೆ ಕೈ ಹೊತ್ಕೊಂಡು ಪೊರೆ ಬಂದ ಕಣ್ಣಳನ್ನ ದಿಗಂತದ ಕಡೆ ತಿರುಗಿಸುತ್ತಾ ಲಟಲಟಾಂತ ನೆಟ್ಟಿಗೆ ಮುರೀತಂತೆ. ಗುಂಡನಿಗೆ ಏನೂ ಅರ್ಥವಾಗ್ದೇ ಏನೂ ಮಾಡೋದಕ್ಕೂ ತೋಚದೆ ತಾನೇನು ತಪ್ಪಿನ ಮಾತಾಡ್ದೇ ಅಂತ ಯೋಚಿಸ್ತಾ ಪೆಚ್ಚಾಗಿ ನಿಂತ್ಕೊಂಡ್ಬಿಟ್ನಂತೆ. ಅಷ್ಟರಲ್ಲಿ ಅಲ್ಲಿಗೆ ಬಂದ ಇವನ ಭಾವಮೈದ, ಪಾವು ಚಟಾಕು ನಾದಿನಿಯರು ಎಲ್ಲಾ ಇವನನ್ನ zoo ನಲ್ಲಿರೊ ಪ್ರಾಣೀನ ನೋಡೋ ತರಹ ದುರುಗುಟ್ಟಿಕೊಂಡು ನೋಡಿದ್ದೂ ನೋಡಿದ್ದೇ! ಪಾಪ! ಸೀತಾಮಾತೇನ ಭೂದೇವಿ ತನ್ನ ಮಡಿಲಲ್ಲಿ ಸೇರಿಸಿಕೊಳ್ಳುವಾಗ ಎರಡು ಹೋಳಾಗಿಬಿಟ್ಳಲ್ಲಾ ಹಾಗೆ ಈಗ ಇಬ್ಭಾಗವಾಗಿ ತನ್ನ ಹುದುಗಿಸಿಕೊಂಡು ಬಿಡಬಾರದೇ ಅನ್ನೊ ಅಷ್ಟು ಹೆದರಿಕೆ, ತಪ್ಪಿತಸ್ಥ ಮನೋಭಾವ ಬಂದು ಬಿಡ್ತಂತೆ ಆ ನಿಮಿಷದಲ್ಲಿ ಅವನಿಗೆ ಪಾಪ!

ಈ transfer ಸುದ್ದಿ ಕೇಳಿ ಇಷ್ಟೆಲ್ಲಾ ಗಲಾಟೆ ಯಾಕೆ ಅಂದ್ರೆ ಸುಮಾರು ಏಳನೆ ಇಯತ್ತೆ ತನಕ ಓದಿದ ಅವರತ್ತೆಗೆ (ಅಸ್ಸಾಂ) ಗೌಹಾತಿ ಹೆಸರಿನ ಊರುಗಳು ನಮ್ಮ ದೇಶದಲ್ಲಿ ಇದೆ ಅಂತ ಗೊತ್ತೇ ಇರಲಿಲ್ಲ! ಅದೆಲ್ಲೊ ಅಮೆರಿಕಾಗಿಂತ ದೂರದ ದೇಶವೇನೋ ಅಂತ ಅಂದ್ಕೊಂಡ್ರಂತೆ!

ಆದರೆ ಅಲ್ಲೇ ನಿಂತಿದ್ರಲ್ಲಾ - ಗುಂಡನ ಮಾವ ಮೊಂಡು ಪಂಚೇನ ಮೊಣಕಾಲ್ಮೇಲೆ ಕಟ್ಕೊಂಡು ಹೈ ಸ್ಕೂಲಿನಲ್ಲಿ ಭೂಗೋಳದ ಮೇಷ್ಟ್ರೂಂತ ಅನ್ನಿಸ್ಕೊಂಡೋರು. ಅವ್ರಾದ್ರು ಏನಾದ್ರೂ ಸಮಾಧಾನದ ಎರಡು ಮಾತು ಹೆಂಡ್ತೀಗೆ ಹೇಳ್ತಾರೇನೋ ಅಂತ ಅವರ ಕಡೆ appealing ಆಗಿ ಕಲ್ಲೂ ಕರಗೋ

ಹಾಗೆ ಇವನು ನೋಡಿದ್ರೆ - ಅವರು ಇವನ ದೃಷ್ಟಿಗೆ ದೃಷ್ಟಿನೂ ತಾಕಸ್ದೆ ಎದುರಿಗೆ ನೇತಾಡ್ತಾಯಿದ್ದ ದೊಡ್ಡ ರವಿವರ್ಮನ ದಮಯಂತಿ ಹಂಸದ ಪಠನ ಎಂದೂ ಕಂಡಿಲ್ಲದೇ ಇರೋರ ತರಹ ನೋಡ್ತಾ ತಮಗೂ ಈ ವಿಷಯಕ್ಕೂ ಏನೂ ಸಂಬಂಧವೇ ಇಲ್ಲವೇನೋ ಅನ್ನೊ ತರಹ ನಿಂತಿದ್ರಂತೆ! ಮದ್ವೇ ಆದಾಗ್ನಿಂದ ಗುಂಡ ಆತ ತನ್ನ ಧರ್ಮಪತ್ನಿ ಮುಂದೆ ಜೋರಾಗಿ ಉಸಿರು ಬಿಟ್ಟಿದ್ದನ್ನೂ ಕಾಣ ಅನ್ನಿ.

ಮೂರು ದಿನಗಳು ರೈಲಿನಲ್ಲಿ ಸತತ ಪ್ರಯಾಣ ಮಾಡಿ ತನ್ನ ಮುದ್ದು ಮಡದಿ - ಮೇಲಾಗಿ ಹೊಸಾ ತಾಯಿ ಅವಳ ಸುಂದರ ಮುಖ ನೋಡ್ಕೊಂಡು ಈ ಸುದ್ದಿ ತಿಳ್ಸೋಣಾಂತ ಹುಮ್ಮಸ್ಸಿನಿಂದ ಬಂದ ಗುಂಡ ಈ ಸುಸ್ವಾಗತದಿಂದ ಸೂಜಿ ಚುಚ್ಚಿದ ಬೆಲೂನಿನ ತರಹ 'ಪುಸ್' ಆಗ್ಬಿಟ್ಟ. ಪಾಪ! ರಾತ್ರೆ ಮೂರು ಗಂಟೆಗೆ ಯಾವುದೋ ದರಿದ್ರ ಸ್ಟೇಷನ್ನಿನಲ್ಲಿ ಉಗುರು ಬೆಚ್ಚಗಿನ ಟೀ ಕುಡಿದಿದ್ದು. ಮನೆ ತಲುಪುತ್ತಿದ್ದ ಹಾಗೇ ಮಡದಿ ಸಂತೋಷದಿಂದ ಬಿಸಿ ಬಿಸಿ ಕಾಫಿ ತಂದು ಕೆ.ಎಸ್. ನರಸಿಂಹಸ್ವಾಮಿಗಳ ಪದ್ಯಗಳ heroin ತರಹ ಸ್ವಾಗತ ನೀಡ್ತಾಳೇಂತ ಕನಸು ಕಾಣ್ಕೊಂಡು ಬಂದ ಗುಂಡನಿಗೆ ತನ್ಮೇಲೆ ತನಗೇ ತಡೀಲಾರದಷ್ಟು ಕೋಪ ಬಂತು. ''ಬಂದ ತಕ್ಷಣ ಏನೋ ಕಡಿದು ಕಟ್ಟೆ ಹಾಕ್ಬಿಡ್ತೀನೀಂತ ಈ news ಯಾಕಪ್ಪಾ ಹೇಳ್ದೇ! ಅಚ್ಚುಕಟ್ಟಾಗಿ ಬಿಸಿ ಬಿಸಿ ಕಾಫಿ ತಿಂಡಿ ಆದ್ಮೇಲಾದ್ರು ಬಾಯಿಬಿಟ್ರಿದ್ದೆ ಏನಾಗ್ಹೋಗ್ತಾಯಿತ್ತು ನಿನಗೆ'' ಅಂತ ತನ್ನನ್ನ ತಾನೇ ಬೈದುಕೊಂಡ. ಅತ್ತೆ ಮಾವನ ಕಣ್ಣು ತಪ್ಪಿಸಿ ಒಳ ಕೋಣೆ - ಅದೇ ಬಾಣಂತಿ ಕೋಣೆ ಕಡೆ ಕಣ್ಣು ಹಾಯಿಸಿದರೆ - ಅಲ್ಲಿ ಕಂಡಿದ್ದೇನು! ಕೋಣೆ ಬಾಗಿಲು ಬಡಿದು - ಚಿಲಕಕ್ಕೆ ಒಂದು ದೊಡ್ಡ ಸೌಟು ಸಿಕ್ಕಿಸಿ - ಅರೆಪಾವು, ಪಾವು ಚಟಾಕುಗಳೆಲ್ಲಾ ಲೈನಾಗಿ ಬಾಗಿಲ ಮುಂದೆ ನಿಂತಿವೆ. ಆ ಕೊನೆ ಚಟಾಕು ತನ್ನ ಎರಡು ಕೈಗಳನ್ನೂ ಕಿವಿಗಳ ಪಕ್ಕ ಇಟ್ಕೊಂಡು ಬೀಸಣಿಗೆ ತರಹ ಬಿಸ್ತಾ ನಾಲಿಗೇನ ಮುಂದಕ್ಕೆ ಚಾಚಿ ಇವನನ್ನ ಅಣಕಿಸ್ತಂತೆ. ''ಥೂ! ಹಾಳಾದ್ದೇ! ಅಣಕಿಸ್ತೀಯಾ! ಒಬ್ಬೇ ಸಿಕ್ಕು ನಿನ್ನ ಚರ್ಮ ಸುಲಿದು ಹಾಕಿಬಿಡ್ತೀನಿ'' ಅಂತ ಹಲ್ಲು ಕಟಕಟಾಂತ ಕಡಿದು ನಾಲ್ಗೆ ಬೇರೆ ಕಚ್ಚಿಕೊಂಡನಂತೆ.

ಸರಿ! ಇವ್ನು ಹಾಗೇ ನಿಂತೆ ಇದ್ದಾನೆ. ಅತ್ತೆ ಹಾಗೇ ತಲೆ ಮೇಲೆ ಕೈ ಹೊತ್ಕೊಂಡು ಕೂತೇ ಇದ್ದಾಳೆ. ಮಾವ ಹಂಸ ದಮಯಂತೀನ study ಮಾಡ್ತಾನೇ ಇದ್ದಾರೆ. ಅಜ್ಜಿ ಗೊಣ ಗೊಣ ಗೊಣಗ್ತಾ ನೆಟ್ಗೆ ಮುರ್‍ಕೋ ತಾನೇ ಇದಾರೆ. ಅಷ್ಟರಲ್ಲಿ ಬಾಣಂತಿ ಕೋಣೆಯಿಂದ ಜೋರಾಗಿ ಕೊಕ್ಕೋತಾ ಬಾಗಿಲು ಬಡಿಯೋ ಸದ್ದು. ಶಬ್ಧ ಕೇಳಿ ಪಾವು, ಅರೆಪಾವು, ಚಟಾಕುಗಳು ಬಾಗಿಲ

ಬಳಿಯಿಂದ ದೂರ ಸರಿದರು. ಅತ್ತೆ ತಲೆ ಮೇಲಿಂದ ಕೈ ತೆಗೆದಳು, ಮಾವ ಹಂಸ ದಮಯಂತಿಯಿಂದ ಕಣ್ಣು ಕಿತ್ತು ಬಾಣಂತಿ ಬಾಗಲಿಗೆ ನೆಟ್ಟಿದರು. ಅಜ್ಜಿ ಗೊಣಕೊತಾನೇಯಿತ್ತು. ಅಂದ್ರೆ ನೆಟ್ಟಿಗೆ ಮುರಿಯೋದನ್ನ ನಿಲ್ಲಿಸ್ತು. ಗುಂಡನ ಗುಂಡ್ಗೆ ಗಡಗಡಾಂತ ಬಡ್ಕೊಳ್ಳೊಕ್ಕೆ ಶುರುಮಾಡ್ತು. ಆ ಗಡಗಡ ಮಧ್ಯ ಮನಸ್ಸು ಮಂಡ್ಗೆ ಮೆಲ್ಲೋದಕ್ಕೂ ಶುರು ಮಾಡ್ತು. ಹೆಂಡ್ತಿ ಈಗ್ಲಾದ್ರು ಹೊರಕ್ಕೆ ಬರ್‍ತಾಳೆ. ತಾನು ಗೌಹಾತಿಗೆ ಹೊಗೋ ವಿಷಯ ಹೇಳಿ:

ನಲ್ಲೆ ಬಾರೇ!
ನಿನಗಾಗಿ ನಾನು!
ನನಗಾಗಿ ನೀನು;
ನಮಗಾಗಿ ಮುದ್ದು ಕಂದ;
ದೂರದ ಊರಿನಲ್ಲಿ ನಮ್ಮ ಸಂಸಾರ
ನಮ್ಮಮ್ಮನೊಡೆ ನೀ ಜಗಳವಾಡೆ;
ನಿಮ್ಮಮ್ಮ ನೋಡೆ ನಾ ಹೆದರುವೆನಲ್ಲೆ ನಲ್ಲೆ!

ಎಂದೆಲ್ಲಾ ಪದ್ಯವನ್ನೂ ಬೇರೆ ಕಟ್ಟಿದ (ತಾನೇನು ಕೆ.ಎಸ್.ನ ಗಿಂತ ಕಮ್ಮೀನೇ) ಪಾವು ಚಟಾಕುಗಳು ಬಾಗಿಲಿಗೆ ಬಡಿದಿದ್ದ ಸೌಟು ತೆಗೆಯುತ್ತಲೂ ಓಡಿ ಬಂದ್ಲು ಹೊರಗೆ ಇವನ ನಲ್ಲೆ. ತಾಯಿ ಮುಂದೆ ನಿಂತು ಏನೇನೋ ಅರ್ಥವಾಗದ ರೀತಿಯಲ್ಲಿ ಕೂಗಿಕೊಂಡ್ಲು. ಅದರ "gist" ಮಗೂ ಜೋರಾಗಿ ಬಿಕ್ಕಳಿಸುತ್ತಾ ಕುಡಿದ ಹಾಲೆಲ್ಲಾ ಉಗುಳ್ತೂಂತ ಸ್ವಲ್ಪ ಮಟ್ಟಿಗೆ ಅರ್ಥವಾಯ್ತಂತೆ ಗುಂಡನಿಗೆ. ಆದರೆ ಅವಳ ಮುಖ ದರ್ಶನ ಮಾತ್ರ ಅವನಿಗೆ ಆಗಲೇ ಇಲ್ಲ. ಹೇಗೆ ಬಂದಳೋ ಹಾಗೇನೇ ಅಳುತ್ತಾ ಓಡಿಹೋದಳು ರೂಮಿಗೆ ಅವಳ ಹಿಂದೆ ಅವಳ ತಾಯಿ; ತಾಯಿ ಹಿಂದೆ ಅಜ್ಜಿ 'ಏನಂತೇ' ಅಂತ ಏಳಲು ಪ್ರಯತ್ನಿಸುತ್ತಿತ್ತು ಅಜ್ಜಿ. ತಾಯಿ ಒಳಗೆ ಹೋಗ್ತಿದ್ದಾಗೇ ಬಾಗಿಲು ಮುಚ್ಚಿ ಸೌಟು ಜಡಿದು ಪಾವು ಚಟಾಕುಗಳು ಪುನಃ ಪಹರೆ ಶುರು ಮಾಡಿದವು.

ಒಳಗಡೆ ಏನು ನಡೀತೋ, ಏನಾಯ್ತು ಒಂದೂ ಗೊತ್ತಾಗುತ್ತಿರಲಿಲ್ಲ ಗುಂಡನಿಗೆ. ಅತ್ತೆ ಅಜ್ಜಿ ಇಲ್ಲ ಸಲ್ಲದ ಚಾಡಿ ತನ್ನ ಮೇಲೆ ಹೇಳಿರಬಹುದೆ? ತನಗೆ X-Ray ಕಣ್ಣಾದ್ರೂ ಇದ್ದಿದ್ರೆ ಬಾಗಿಲ ಹಿಂದೆ ಏನು ನಡೀತಾಯಿದೇಂತೆ ತಿಳಿದುಕೋ ಬಹುದಾಗಿತ್ತಲ್ಲ. ತಲೇಮೇಲೆ ಕೈ ಹೊತ್ತು ಅಲ್ಲೇ ಇದ್ದ ಬೆತ್ತದ ಕುರ್ಚಿ ಮೇಲೆ ಕೂತೇ ಬಿಟ್ಟ, ಸದ್ಯ! ಅವನ ಪುಣ್ಯ. ''ಯಾಕೆ ಕೂತ್ಕೊಂಡೆ! ಎದ್ದೇಳು'' ಅಂತ ಯಾರೂ ಅನ್ಲಿಲ್ಲ. ಕಾಫಿ ತಿಂಡಿ ಅಂತೂ ಕನಸಿನ ಗಂಟೇ! ತಾನಾದ್ರು ಸ್ವಲ್ಪ ಮಟ್ಟಿಗಾದ್ರೂ ಹಸಿವು ನೀರಡಿಕೆ ತಡ್ಕೊಬಹುದು! ಆದ್ರೆ, ಪಾವು,

ಅಪಾವು, ಚಟಾಕುಗಳು ಹಸಿವು ಅನ್ನದೆ ಬಾಯಿ ಮುಚ್ಕೊಂಡು ಸುಮ್ನಿದ್ದ್ಯಲ್ಲಾಂತ ಅವನಿಗೆ ಆಶ್ಚರ್ಯ. ಆ ಮಾರಿಯಂಥ ಮಾತೆಯ training ಮಹಿಮೆ ಅಲ್ದೇ ಇನ್ನೇನು! ಹೀಗೆ ಯೋಚನಾ ಸರಣಿಯಲ್ಲಿ ಇರಬೇಕಾದ್ರೆ 'ಡಬಾರ್' ಅಂತ ಬಾಗಿಲು ತೆಗೆದು ಓಡಿಬಂದ್ಲು ಪ್ರಿಯತಮೆ. ಕೆದರಿದ ಕೂದಲು - ನಿದ್ರೆಯಿಲ್ಲದ ಕಣ್ಣುಗಳು - ಮಗುವಿನ ಬಿಕ್ಕಳಿಗೆ ಅಳುವಿನಿಂದ ಬಾಡಿದ ಮುಖಕಮಲ - ಮದುವೆಸಲ್ಲಿ ನಗುನಗುತ್ತಾ ಮನ ಮನೆ ತುಂಬಿದ ಪ್ರಿಯೆ ಇವಳೇನೇ ಅಂತ ಆಶ್ಚರ್ಯ ಆಯ್ತು ನಮ್ ಗುಂಡಂಗೆ. ಬಂದೋಳೆ ಕರ್ಕಶವಾಗಿ ''ಏನ್ರಿ! ನಿಮಗೇನು ಜ್ಞಾನ ಇದ್ಯೇ! ಅಧ್ಯಾವ ಸುಡುಗಾಡಿಗೇರಿ ನೀವು ಕರ್ಕೊಂಡು ಹೋಗೋದು ನನ್ನ!'' ಇವನ ಉತ್ತರಕ್ಕೂ ಕಾಯ್ದೆ ''ಆಫೀಸಿನಲ್ಲಿ ಕೆಲ್ಸ efficient ಆಗಿ ಮಾಡ್ತೀರೋ ಇಲ್ವೋ ಅದಕ್ಕೆ ನಿಮ್ಮನ್ನ ಎಲ್ಲೋ ದೂರಾದೇಶಕ್ಕೆ ಎಸೀತಾಯಿದ್ದಾರೆ ಅಂತ ಕಾಣ್ಸುತ್ತೆ! ನಾನು ಮಗೂನ ಕಟ್ಕೊಂಡು ನೀವು ಹೇಳಿದ ಕಡೆಗೆಲ್ಲಾ ನಿಮ್ಹಿಂದೆ ಅಲ್ಯೋಕ್ಕೆ ನೀವಿಟ್ಟ ಆಳೇನ್ರೀ! ನೀವೆಲ್ಲಿಗೆ ಬೇಕಾದ್ರೂ ಹೋಗಿ! ನಾನು ಮಾತ್ರ ಇಲ್ಲಿಂದ ಅಲ್ಲಾಡೋದಿಲ್ಲ!'' ಅಂತ ಕೂಗಿ ಅಲ್ಲಾ ರೂಮಿಗೆ ವಾಪಸ್ಸಾದಳು. ಪಾವು ಚಟಾಕು ಸೌಟನ್ನು ಬಾಗಿಲಿಗೆ ಸಿಕ್ಕಿಸಿದ್ವು, ಕಾಫಿ ತಿಂಡಿ ಬೀಳದ ಹೊಟ್ಟೆ ಚುರ್ ಗುಟ್ಟುತ್ತಿತ್ತು. ಹಾಗೆ ಚಪ್ಪಲಿ ಮೆಟ್ಟಿ ಹೊರಗೆ ಹೋಗಿ - ಎರಡು ಮಸಾಲೆ, ನಾಲ್ಕು ಇಡ್ಲಿ ಎರಡು ಬಿಸಿ ಬಿಸಿ ಕಾಫಿ - ಹತ್ರದ ಹೋಟೆಲಿನಲ್ಲಿ - ಹಾಕ್ಕೊಂಡ ಮೇಲೆ ತಲೆ ಚುರುಕಾಗಿ ಕೆಲ್ಸ ಮಾಡ್ತು. ಸರಿ! ಹೀಗಿಂದ ಹೀಗೇ ಬಸ್ಸು ಹತ್ತಿ ತಂದೆ ತಾಯಿ ಮನೆಗೆ ಹೋಗಿ ಅಲ್ಲಿ ಸುದ್ದಿ ತಿಳ್ಸಿ - ಎರಡು ದಿನ ಇದ್ದು ಮುಂದಿನ ವಿಷಯ ಯೋಚಿಸೋದು. ಮನೆಗೆ ಬಂದೋನೇ ಬ್ಯಾಗ್ ಹಿಡಿದು ಪ್ರಯಾಣಕ್ಕೆ ಸಿದ್ಧನಾದ. ಪ್ಯಾಕ್ ಮಾಡೋ ಪ್ರಮೇಯವೇ ಇರಲಿಲ್ಲವಲ್ಲ - ಸೂಟ್‌ಕೇಸ್ ಬಿಚ್ಚಿದ್ರೆ ತಾನೇ ಪ್ಯಾಕಿಂಗ್. ಇವನನ್ನ ಎಲ್ಲಿಗೇ ಹೊರಟಿರಿ - ಇದ್ಹೋಗಿ ಅಂತ ಯಾರೂ ಕೇಳಲೂ ಇಲ್ಲ! ಇವನನ್ನ ಹೇಳೂದಕ್ಕೂ ಬಿಡಲಿಲ್ಲ! ಹೊರಗೆ ಹೋಗೋದಕ್ಮುಂಚೆ ಪಹರೆ ಕೊಡುತ್ತಿದ್ದ ಪಾವು ಚಟಾಕುಗಳನ್ನು ತಳ್ಳಿ ಬಾಣಂತಿ ಕೋಣೆಗೆ ನುಗ್ಗಿದ. ತೊಟ್ಟಿಲಲ್ಲಿ ಮಲಗಿದ್ದ ಮಗು ಕೆನ್ನೇನ ಮೃದುವಾಗಿ ಸವರಿದ ಅಷ್ಟರಲ್ಲೇ ಅಲ್ಲೇ ಮುಸುಕು ಬೀರಿ ಬಿದ್ದಿದ್ದ ಮೂಟೆ ''ನಾನೆಲ್ಲಿಗೂ ಬರೋಲ್ಲ! ನಿಮ್ಜೊತೆಗಂತೂ ಮೊದ್ಲೇ ಬರೋಲ್ಲ! ನಿಮ್ಮಮ್ಮನ ಮನೇಗೂ ಹೋಗೋಲ್ಲ. ನಾನಿಲ್ಲೇ ಇರೋಳು! ತಿಳ್ಕೊಂಬಿಡಿ!'' ಅಂತ ಅರಿಚಿದಾಗ್ಲೇ ಗೊತ್ತಾಗಿದ್ದು ಆ ಮೂಟೆ ಮಲಗಿಲ್ಲ ಎದ್ದಿದೆ ಅಂತ.

''ಥೂ! ನಿನಗೆ ಹೊಸ ಹೆಂಡ್ತೀಂತ ಸದರ ಕೊಟ್ಟಿದ್ದಕ್ಕೆ ಹೆಚ್ಕೊಂಡಿದ್ದೀಯಾ! ಬಂದ್ರಾದ್ರೂ ಬಾ ಬಿಟ್ಟಾದ್ರೂ ಬಿಡು!'' ಅಂತ ಮನಸ್ಸಿನಲ್ಲೇ ಗೊಣಗಿಕೊಂಡು ಹೊರಬಂದ. ಅತ್ತೆಮಾವ, ಪಾವು ಚಟಾಕುಗಳು, ಗೃಧ್ರನಂತಿದ್ದ ಆ

ಭಾವಮೈದುನನಿಗೆ ತಂದಿದ್ದ gift ಎಲ್ಲಾ ಇವನೊಂದಿಗೇ ಸೂಟ್‌ಕೇಸ್‌ನಲ್ಲೇ ವಾಪಸ್ಸಾದವು. ತಂದೆ ತಾಯಿಯರೊಂದಿಗೆ ಮಿಕ್ಕ ಎರಡು ದಿನ ಕಳೆದು ದೆಹಲಿಗೆ ಮರಳಿ ನಂತರ ಗೌಹಾತಿಗೆ ಪ್ರಯಾಣ ಬೆಳೆಸಿದ.

ಅಲ್ಲಿ ಚೆನ್ನಾಗಿತ್ತು. ಕೆಲಸ ಕಾರ್ಯಾಂತ ಸಮಯಾನೂ ಚೆನ್ನಾಗಿ ಕಳೀತಾಯಿತ್ತು. ಅಶೋಕ್‌ಕುಮಾರ್ ಬ್ಯಾನರ್ಜಿ (A.K. ಬ್ಯಾನರ್ಜಿ) ಕಲ್ಕತ್ತಾದೋನು - ಇವನ ನೆಚ್ಚಿನ ಸ್ನೇಹಿತನಾದ. ಅವನ ಮನೇಲಿ ಶಾಖಾಹಾರದ ಅಡಿಗೆಯಾದ ದಿನ ತಪ್ಪದೆ ಇವನಿಗೆ ನಿಯಂತ್ರಣ ಹೋಗುತ್ತಿತ್ತು. ಇವನ ಮನೆ ಪಕ್ಕದ್ದೇ "ಬಡಾಬಾಬು (head clerk) ಮನೆ. ಅವರ ಮನೆಯಿಂದಾನೂ reqular ಆಗಿ ಇವನಿಗೆ ಊಟ ಬರ್ತಾಯಿತ್ತು. ಅವರ ಹೆಣ್ಣು ಮಕ್ಕಳಿಬ್ರೂ - ಸಿಪ್ರಾ, ನಿಧಿ - ಹೆಚ್ಚೂ ಕಮ್ಮಿ ಇವನ ಮನೆಯಲ್ಲೇ ರಜ ದಿನಗಳನ್ನು ಕಳಿಯುತ್ತಾ ಇದ್ದರು.

ಈ ಮಧ್ಯ ಎ.ಕೆ. ಬ್ಯಾನರ್ಜಿ ಟೂರ್‌ಗೇಂತ ಗುಂಡನ ಹೆಂಡತಿ ಊರಿಗೆ ಹೋದ. ಅವನ ಹೆಂಡತಿ ಮಗುವನ್ನು ನೋಡಲೆಂದು ಅವರ ಮನೆಗೂ ವಿಸಿಟ್ ಕೊಟ್ಟ. ಗೌಹತಿಯ ಸಮಾಚಾರವೆಲ್ಲಾ ಕೂಲಂಕುಶವಾಗಿ ವರ್ಣಿಸಿದ. "ಭಾಭಿ! ಊರೆಲ್ಲಾ ತುಂಬಾ ಚೆನ್ನಾಗಿದೆ. ನೀವು ಬೇಗ ಮಗೂನ ಕರೆದುಕೊಂಡು ಬನ್ನಿ!" ಅಂತ ಹೇಳಿದ. ಬಡೆ ಬಾಬು, ಅವರ ಪತ್ನಿ, ತನ್ನ ಪತ್ನಿ, ಶಿಪ್ರಾ, ನಿಧಿ ಎಲ್ಲರ ಬಗ್ಗೆಯೂ ಹೇಳಿದ.

ಗೌಹತಿಗೆ ವಾಪಸ್ಸಾದ ಬ್ಯಾನರ್ಜಿಗೆ ಗುಂಡನ ಮುಂದೆ ಅವನ ಮಗುವನ್ನು ಬಣ್ಣ ಬಣ್ಣವಾಗಿ ವರ್ಣಿಸುವುದೆಂದರೆ ಬಲು ಆನಂದ. ಗುಂಡನಿಗೂ ಅಷ್ಟೆ. ಎಷ್ಟು ಕೇಳಿದರೂ ತೃಪ್ತಿಯಾಗದು. ಅಲ್ಲಿಂದ ಬಂದಾಗಿಂದ ಬ್ಯಾನರ್ಜಿ ತನ್ನ ಕಂಡಾಗಲೆಲ್ಲಾ ಏನೋ ಒಂದು ರೀತಿ ಕಿರುನಗೆ ಬೀರ್ತಾ ಇರ್ತಾನೆ - ಏನೋ ಗುಟ್ಟು ಬಚ್ಚಿಟ್ಟುಕೊಂಡ ಹಾಗೆ - ಯಾಕೇಂತ ಗೊತ್ತಾಗಲಿಲ್ಲ. "ಏನೋ ಅದು! ಹಾಗೆ ನಗ್ತಾಯಿದ್ದೀಯಾ! ಏನು ಗುಟ್ಟು ಬಚ್ಚಿಟ್ಟುಕೊಂಡಿದ್ದೀ ಹೇಳು!" ಅಂತ ಗುಂಡ ಎಷ್ಟು ಕೇಳಿದರೂ ಏನೂ ಹೇಳ್ತಾಯಿರಲಿಲ್ಲ. ಇನ್ನಷ್ಟು ನಗು ಅಷ್ಟೆ!

ಎ.ಕೆ. ಬ್ಯಾನರ್ಜಿ ಬಂದು ಒಂದು ವಾರ ಕಳೀತು. ಅಷ್ಟರಲ್ಲಿ ಗುಂಡನಿಗೆ ಹೆಂಡ್ತಿಯಿಂದ ಒಂದು ಟೆಲಿಗ್ರಾಂ. 'ನಾಳೆ ತಲಪ್ತಾಯಿದ್ದೀವಿ. airport ನಲ್ಲಿ meet ಮಾಡಿ' ಅಂತ. ಗುಂಡನಿಗೆ ಆಶ್ಚರ್ಯ. ಕುಣಿದಾಡಿಬಿಟ್ಟ. "ನೀನೇ ಏನ್ನೋ trick ಮಾಡಿದೀ ಕಣೋ ಬ್ಯಾನರ್ಜಿ! ಇಲ್ದೇ ಇದ್ರೆ ಖಂಡಿತ ಅವಳಂತೂ ಬರೋಳಲ್ಲ" ಗುಂಡ ಬ್ಯಾನರ್ಜೀನ ತಬ್ಬಿಕೊಂಡುಬಿಟ್ಟ. ಶಿಪ್ರಾ, ನಿಧೀನಂತೂ

ಮಾರನೆ ದಿನ airportಗೆ ಹೋಗೋ ತನಕ ಕೆಳಗೆ ಇಳಿಸಲೇ ಇಲ್ಲ ಅನ್ನಬಹುದು. ಮಗುವಿನ ವಿಷಯ ಹೇಳಿದ್ದೇ ಹೇಳಿದ್ದು. ಮಾರನೆ ದಿನ ಗುಂಡ ಏರ್‌ಪೋರ್ಟ್‌ಗೆ ಹೊರಟಾಗ plane ಬರೋದಕ್ಕೆ ಇನ್ನೂ ಎರಡು ಗಂಟೆಗಳಿದ್ದವು. ಅಷ್ಟು ಆತುರ! ಜೊತೆಗೆ ಬ್ಯಾನರ್ಜಿನೂ ಹೊರಟ. ಇವನು ಎಷ್ಟೇ ಆತುರ ಪಟ್ಟರೂ plane ತನ್ನ ಹೊತ್ತಿಗೇ ತಾನು ಹಾಜರಾಯ್ತು! ಪ್ರಾಯಾಣಿಕರೆಲ್ಲಾ ಕೆಳಗೆ ಇಳಿದರು. ಗುಂಡನ ಪತ್ನೀನೂ ಇಳಿದಳು. ಅವಳ ಹಿಂದೆ ಅವರಮ್ಮ ಮಗು ಎತ್ಕೊಂಡು ಇಳಿದರು. ಅವರ ಹಿಂದೆ ಪಾವೂ ಚಟಾಕೂ ಇಳುದ್ವು, ಒಂದರ ಕೈಲಿ ಒಂದು ಹಳೆ ಕಾಲದ್ದು ಹಿತ್ತಾಳೆ ರೈಲುಚೊಂಬು! ಇನ್ನೊಂದರ ಕೈಲಿ ಅದರ ಎತ್ತರದ್ದೇ ಒಂದು ದೊಡ್ಡ ಬೊಂಬೆ ನೇತಾಡುತ್ತಿದ್ದುವು. ಅವುಗಳ ಹಿಂದೆ ಆ ಗೃಧ್ರ - ಇವನ ಭಾವಮೈದ ಇಳಿದ. ಅವನ ಹಿಂದೆ ಇವನ ಮಾವ ಇಳಿದ. ತಾಯಿ ಕೋಳಿ ಹಿಂದೆ ಚಿಳ್ಳೆ ಪಿಳ್ಳೆ ಮರಿ ಕೋಳಿಗಳು ನಡ್ಕೊಂಡು ಬರೋಲ್ವೇ ಹಾಗೇ ಒಬ್ರ ಹಿಂದೆ ಇನ್ನೊಬ್ರು ಹೀಗೆ ನಡೀತಾ ಗುಂಡ ಇದ್ದೆಡೆ ಬಂದ್ರು. ಈ ದಂಡನ್ನು ಕಾಣ್ತಿದ್ದಾಗೆ ಗುಂಡ ಅರ್ಧ ಮೂರ್ಚೆ ಹೋದ. ಹತ್ತಿರ ಬರ್ತಿದ್ದಾಗೆ ಮಾವ ಮುಂದೆ ಬಂದು ''ಅಳಿಯಂದಿರೇ! ನಮ್ಮೆಲ್ಲರ ಟಿಕೇಟು ಖರ್ಚು ಮತ್ತಿತರೆ ಖರ್ಚಿಗೇಂತ ಮಾರ್ವಾಡಿ ಹತ್ರ ನಿಮ್ಮೆಸರಿನಲ್ಲಿ ಸಾಲ ಮಾಡಿದ್ದೀನಿ'' ಅಂತ ಅಂತ್ಹಿದ್ದಾಗೆ ಗುಂಡ ಪೂರ್ತಿ ಮೂರ್ಛೆ ಹೋದ. ಮಾವ ಹೇಳಿದ್ದ ಧಾಟಿ ನೋಡದ್ರೇ! ''ನಂಗೆಲ್ಲಾ ಗೊತ್ತಾಗಿದೆ ಕಣೋ! ನಿನ್ನ ವ್ಯವಹಾರ. ನಾನೂ ಒಂದು ಕೈ ನೋಡೇ ಬಿಡ್ತೀನಿ!'' ಅನ್ನೋ ಧಾಟಿ ಇತ್ತು.

ಇದುವರೆಗೂ ತೆಪ್ಪಗೆ ನಿಂತಿದ್ದ ಬ್ಯಾನರ್ಜಿ ಗುಂಡ ಮೂರ್ಛೆ ಹೋದದ್ದು ನೋಡಿ ಅಲ್ಲಿಂದ ಕಂಬಿ ಕಿತ್ತ.

ಗುಂಡನ ಧರ್ಮಪತ್ನಿ ತನ್ನ ಮನಸ್ಸು ಬದಲಾಯಿಸಿ ಇಲ್ಲಿಗೆ ಬಂದಿದ್ದರ ಕಾರಣಾ ತಾನೇ ಏನೂಂತ ಕೇಳ್ತೀರಾ! ಅದನ್ನ ಬ್ಯಾನರ್ಜಿನ ಕೇಳಿದರೇ ಒಳ್ಳೇದು. ''ಸರಿ! ಅವನೆಲ್ಲಿ? ಅವನು ಪರಾರಿಯಾಗ್ಬಿಟ್ನಲ್ಲಾ. ಅವನನ್ನ ಹುಡುಕೋ patience ಊ ಇಲ್ಲ! ಅಂತೀರ! ಹಾಗಾದ್ರೆ ಕೇಳಿ!

ಬ್ಯಾನರ್ಜಿ ಗೌಹತಿ ಬಗ್ಗೆ ಕೂಲಂಕುಶವಾಗಿ ಹೆಂಡ್ತಿ ಹತ್ರ ವರ್ಣಿಸಿದನಲ್ಲಾ ಆಗ ಬಡಾಬಾಬು ಮಕ್ಳು ಶಿಪ್ರಾ, ನಿಧಿ ಅಂತ ಮಾತಿಗೊಂದು ಸತಿ ಹೇಳಿದ್ದೂ ಹೇಳಿದ್ದೇ ಆದ್ರೆ ಅವರ ವಯಸ್ಸು 6 ಮತ್ತು 4ರ ಹೊಸ್ತಿಲಲ್ಲಿ ಅಂತ ಮಾತ್ರ ಹೇಳಲಿಲ್ಲವಂತೆ. ಅದನ್ನ ಬೇಕೂಂತ ಮುಚ್ಚಿಬಿಟ್ಟನಂತೆ!

★★★

ಷೇರ್ ಖಾನ್

– ಪಿ. ರಾಮಚಂದ್ರ

ತಲೆ ಬರಹ ನೋಡಿದೊಡನೆಯೇ ''ಜಂಗಲ್ ಬುಕ್''ನ ಷೇರ್ ಖಾನ್ ಎಂಬ ಹುಲಿಯೆಂದಾಗಲೀ, ಷಾರುಖ್ ಖಾನ್ ನ ಶಾರ್ಟ್ ಫ಼ಾರಂ ಹೆಸರು ಎಂದಾಗಲೀ, ಖಾನ್ ಖಾನ್ದಾನಿನ ಖಾನ್ ಎಂದಾಗಲೀ ನೀವು ಯೋಚಿಸಿದರೆ ಅದು ಸರಿಯಲ್ಲ. ಇವ ಅವರಾರೂ ಅಲ್ಲ. ಇವನು ಷೇರ್ ಅಂದರೆ ''ಹುಲಿ'' ಎಂದುಕೊಂಡರೂ ಸಹ, ಒಮ್ಮೊಮ್ಮೆ ಇವ ಗೂಳಿ(ಬುಲ್) ಆಗುತ್ತಾನೆ. ಕೆಲವೊಮ್ಮೆ ಕರಡಿ (ಬೇರ್) ಆಗುತ್ತಾನೆ. ಅಂದರೆ ಇವನು ಯಾರೆಂದು ನೀವಾಗಲೇ ಊಹಿಸಿರಬಹುದು. ಹಾಂ... ಹೌದು... ಇವನು ಖಾನ್. ಸಾಮಾನ್ಯವಾಗಿ ರೂ. 10ರ ಮುಖ ಬೆಲೆಯ ಇವನ ಬೆಲೆಯ ಏರಿಳಿತಕ್ಕೆ ಇತಿ, ಮಿತಿ ಇಲ್ಲ. ಒಮ್ಮೆ ಒಂದು ರೂಪಾಯಿಗಿಳಿದರೆ, ಇನ್ನೊಮ್ಮೆ ಸಾವಿರ ರೂಪಾಯಿಗೂ ಮಿಕ್ಕಿ ಏರಬಲ್ಲ. ಕೊಡಮಾಡಿದ ಕಂಪನಿಗಳು ಕೊಡಮಾಡುವ ಲಾಭಾಂಶಕ್ಕಾಗಲೀ, ಬೋನಸ್‌ಗಾಗಲೀ ಕಾದು ಕುಳಿತರೆ ಇವನನ್ನು ಪಡೆದವರಿಗೆ ಪಂಗನಾಮವೇ ಗತಿ. ಕೈಯ್ಯಿಂದ ಕೈಯ್ಯಿಗೆ ಬದಲಾದಷ್ಟೂ ಇವನ ಅಂತಸ್ತು ಏರುತ್ತಾ ಹೋಗುತ್ತದೆ. ಇವನ ''ಪೇಟೆಯ'' ಅಂಗುಲಂಗುಲವನ್ನೂ ಬಲ್ಲವರೂ ಸಹ ಇವನ ವಿಚಿತ್ರ ಚಂಚಲ ಬುದ್ಧಿಯನ್ನು ಅರ್ಥಮಾಡಿಕೊಳ್ಳಲಾರರು. ಕೊಡು, ಕೊಳ್ಳುವವರ ಮಾನಸಿಕ ಸ್ಥಿತಿಗಳನ್ನು ವ್ಯಸ್ಥಗೊಳಿಸಬಲ್ಲ. ಹಾಗೆಂದು ಯಾವಾಗಲೂ ಇವನೇ ಗೆಲ್ಲುತ್ತಾನೆಂದಲ್ಲ. ಏಕೆಂದರೆ, ಷೇರಾಟದಲ್ಲಿ (ಹೋರಾಟದಲ್ಲಿ ಎಂಬಂತೆ) ಇವನಂತಹ ಜಗ ಜಟ್ಟಿಗಳು ಬಹಳ ಮಂದಿ ಇರುತ್ತಾರೆ.

ತನ್ನನ್ನು ಹುಟ್ಟಿಸಿದ ಕಂಪನಿ ಸರಿಯಿಲ್ಲವೆಂದು ಕಂಡರೆ, ಕೇಂದ್ರ ಹಣಕಾಸು ಸಚಿವರಿಗೆ ನೆಗಡಿಯಾದರೆ, ಇವನ ವ್ಯಾಪಾರಿಗಳ ಅಂಗಡಿಗಳ ಮೇಲೆ ತೆರಿಗೆ ಅಧಿಕಾರಿಗಳು ಧಾಳಿ ಮಾಡಿದರೆಂಬ ಸುದ್ದಿ ಹರಡಿದರೆ, ಇವನು ''ಕರಡಿ''ಯಾಗಿ, ಇವನ ಬೆಲೆ ಹಟಾತ್ತನೆ ಇಳಿಯುತ್ತದೆ. ತನ್ನನ್ನು ಸೃಷ್ಟಿಸಿದ ಕಂಪೆನಿಯು ಲಾಭದಾಯಕವಾಗಿದ್ದರೆ, ಆ ಕಂಪೆನಿಯ ಮೂಲಾಧಾರ ಕುಸಿಯುತ್ತಿದ್ದರೂ ಇವನು ''ಗೂಳಿ''ಗಳ ಕೈಗೆ ಸಿಲುಕಿ ತನ್ನ ಅಂತಸ್ತನ್ನು ಹೆಚ್ಚಿಸಿಕೊಳ್ಳಬಲ್ಲ. ಹೀಗೆ ಕರಡಿಯಾಗಿಯೂ, ಗೂಳಿಯಾಗಿಯೂ ಇತರರನ್ನು ಕುರಿಗಳಾಗಿಸಬಲ್ಲ. ದೇಶದಲ್ಲಿ ನಡೆಯುವ, ಮುಂದೆ ನಡೆಯಬಹುದೆಂದು ಅಂದಾಜು ಮಾಡಿದ ಯಾವುದೇ ಸಣ್ಣ ಪುಟ್ಟ ಅಥವಾ ದೊಡ್ಡ ಘಟನೆಗಳಿಂದ ಇವರ ರೂಪ

ಬದಲಾಗಬಲ್ಲದು. ಹಣವನ್ನೆಣಿಸದೆ ಶ್ರೀಮಂತನಾಗಬಲ್ಲ ಅಥವಾ ಬಿಕಾರಿಯಾಗಬಲ್ಲ. ಬೆರಳುಗಳನ್ನು ಮಡಿಸುತ್ತಾ, ಕುಣಿಸುತ್ತಾ, ಮಣಿಸುತ್ತಾ, ವಿವಿಧ ಮುದ್ರೆಗಳಿಂದ ಇವನನ್ನು ಆಟವಾಡಿಸುವವರ ಕೈಗೊಂಬೆಯಾಗಬಲ್ಲ. ಕೆಲವು ವೇಳೆ ಇತರರೊಂದಿಗೆ ತಾನೂ ''ಬಕರಾ'' ಆದರೂ ತನ್ನನ್ನು ತಾನು ''ಕರಡಿ'' ಎಂದು ಪ್ರತಿಬಿಂಬಿಸಬಲ್ಲ. ದೇಶದ ಕೈಗಾರಿಕೆ, ವ್ಯಾಪಾರ, ವ್ಯವಹಾರ, ಆರ್ಥಿಕ ಪರಿಸ್ಥಿತಿಗಳ ನಿಲುವುಗನ್ನಡಿ ಈತ. ಈತನನ್ನು ನೋಡಿ, ದೇಶದ ಆರ್ಥಿಕ ಪರಿಸ್ಥಿತಿಯನ್ನು ಸ್ವಲ್ಪ ಮಟ್ಟಿಗೆ ಅಳೆಯಲು ಸಾಧ್ಯ. ಇಲ್ಲದ ಸಂಪತ್ತನ್ನು ಸೊಗಸಾಗಿ ರೂಪಿಸಬಲ್ಲ. ಇದ್ದ ಸಂಪತ್ತನ್ನು ನಾಶ ಮಾಡಬಲ್ಲ. ಸೃಷ್ಠಿ, ಸ್ಥಿತಿ, ಲಯ ಈ ಮೂರೂ ಕೃತ್ಯಗಳ ಕರ್ತೃಗಳು ಬ್ರಹ್ಮ, ವಿಷ್ಣು, ಮಹೇಶ್ವರರೆಂದು ಮೂವರಿದ್ದರೆ, ಈ ಮೂರೂ ಕಾರ್ಯಗಳು, ಷೇರು ಪೇಟೆಯಲ್ಲಿ ಇವನಲ್ಲೇ ಸಮ್ಮಿಳಿತ.

ಇವನು ಜನಿಸುವಾಗ, ಯಾವುದೇ ಸಂಸಾರದಲ್ಲಿ ಒಂದು ಮಗು ಜನಿಸಿದಾಗ ಆಗುವುದಕ್ಕಿಂತಾ ಅಧಿಕವಾದ ಆನಂದ, ಉತ್ಸಾಹದ ವಾತಾವರಣ ನಿರ್ಮಿಸಬಲ್ಲ. ಇವನ ಜನ್ಮದಾತರಿಗೂ ಆತಂಕ ತರಬಲ್ಲ. ಜನಿಸಿದೊಡನೆಯೇ ಆಂಜನೇಯನಂತೆ ಗಗನಕ್ಕೆ ಚಿಮ್ಮಬಲ್ಲ ಅಥವಾ ಪ್ರತಿನಿತ್ಯ ತನ್ನ ತೂಕವನ್ನು ಕಳೆದುಕೊಳ್ಳುತ್ತಾ ಹೋಗಬಲ್ಲ. ಏನೇ ಆದರೂ ತಾನು ಮಾತ್ರಾ ಸ್ಥಿತಪ್ರಜ್ಞನಂತೆ ಇರಬಲ್ಲ.

ಇತ್ತೀಚಿನ ವರ್ಷಗಳಲ್ಲಿ ಈತ ತನ್ನ ಮನಬಂದಂತೆ ತಿರುಗುವುದು ಕಡಿಮೆಯಾಗುತ್ತಿದೆ. ಮ್ಯೂಚುವಲ್ ಫಂಡ್ ಎಂಬ ಇವನ ದಾಯಾದಿ ಹುಟ್ಟಿಕೊಂಡಾಗಿನಿಂದ ಇವನ ಸ್ವಾತಂತ್ರ್ಯಕ್ಕೆ ಧಕ್ಕೆ ಬಂದಿದೆ. ಇದರಿಂದಾಗಿ ಇವನ ಅಸ್ಥಿತ್ವದ ಅರಿವು ಎಲ್ಲರಿಗೂ ಇರುವುದರಿಂದ ಇವನು ಮೆರೆಯುವುದು ಕಡಿಮೆಯಾಗುತ್ತಿದೆ. ತಾನೇ ತಾನಾಗಿ ಕುಣಿಯುತ್ತಿದ್ದ ಈತ ಈಗ ಇತರರ ತಾಳಕ್ಕೆ ತಕ್ಕಂತೆ ಕುಣಿಯುತ್ತಿದ್ದಾನೆ.

ಇತ್ತೀಚಿನ ದಿನಗಳಲ್ಲಿ, ಈತ ಸ್ವತಂತ್ರವಾಗಿ ತನಗಿಚ್ಛೆಬಂದಂತೆ ತಿರುಗುವುದು ಕಡಿಮೆಯಾಗುತ್ತಿದೆ. ಮ್ಯಾಚುವಲ್ ಫಂಡ್‌ಗಳು ಪ್ರಾರಂಭವಾದ ನಂತರ ಇವನ ಬಿಂಕ ಬಿನ್ನಾಣಗಳು ಕಡಿಮೆಯಾಗಿವೆ. ಇವನು ಯಾರ ಬಳಿ ಎಷ್ಟು ಸಂಖ್ಯೆಯಲ್ಲಿದ್ದಾನೆಂಬುದನ್ನು ಅಂದಾಜು ಮಾಡಲು ಸಾಧ್ಯವಾಗುವುದರಿಂದ, ಇವನು ಇತರರನ್ನು ಕುಣಿಸುವುದು ಕಡಿಮೆಯಾಗುತ್ತಿದ್ದು, ಇವನೇ ಇತರರ ತಾಳಕ್ಕೆ ತಕ್ಕಂತೆ ಕುಣಿಯಲಾರಂಭಿಸಿದ್ದಾನೆ.

ಈಚೆಗೆ ಈತ ಹೊಸ ಪೀಳಿಗೆಯಲ್ಲಿ ಜನಿಸುತ್ತಿದ್ದರೂ, ಇವನ ಹುಟ್ಟು ಗುಣ ಬದಲಾಗಿಲ್ಲ. ಇಲ್ಲಿಯೂ ಕೆಲವೆಡೆ ಪಾತಾಳದಲ್ಲಿದ್ದರೆ, ಇನ್ನೂ ಕೆಲವೆಡೆ

ಆಕಾಶದೆತ್ತರಕ್ಕೆ ಬೆಳೆಯುತ್ತಾನೆ. ಇವನನ್ನು ನಂಬಿದವರು ನಾಕಕ್ಕೆ ಹೋದವರುಂಟು, ಹಾಗೆಯೇ ನರಕಕ್ಕೆ ಹೋದವರೂ ಉಂಟು. ಸಂಜಯನು ಶ್ರೀಕೃಷ್ಣನ ವಿಶ್ವರೂಪವನ್ನು ವರ್ಣಿಸುವಂತೆ, ಅನೇಕರು ಅನೇಕ ವಿಧವಾಗಿ ಇವನನ್ನು ವರ್ಣಿಸಬಲ್ಲರು. ''ರಾಮಾಯಣದ ಭಾರದಲಿ, ಫಣಿರಾಯನು ತಿಣುಕಿ''ದಂತೆ, ಈ ''ಶೇರು ಖಾನನ ಭಾರದಲಿ ತಿಣುಕಿದನು ಹೂಡಿಕೆದಾರ'' ಎನ್ನಬಹುದು. ಇವನ ಮೇಲಿನ ಸಾಹಿತ್ಯ ವಿಜೃಂಭಿಸುತ್ತಿದೆ.

ನೀವು ಇವನ ದರ್ಶನ ಮಾಡಿಲ್ಲದಿದ್ದಲ್ಲಿ, ಒಮ್ಮೆ ಮಾಡಿ, ಪುನೀತರಾಗಿ!

B.P.

ಅವರಿಗೆ ಸೀರೀಸ್ ಆಫ್ B.P.
ಬ್ಲಡ್ ಪ್ರೆಶರ್
ಬ್ಯಾಕ್ ಪೇನ್
ಹಾಗೂ
ಬಾಟಲ್ ಪ್ರಾಬ್ಲಮ್!!

ಬಿಯರ್

ನನಗೆ ಸಾಕು
ಬರೀ ಬಿಯರ್
ಇವಳ ಆಸೆಯಾದರೋ
ಡಿ ಬಿಯರ್ಸ್

ವಿಸಿಟ್

ಸ್ವಲ್ಪ ಹೊತ್ತಿಗೇಂತ
visit ಗೆ ಬಂದವರು
ಮಿತಿ ಮೀರಿ ಕುಳಿತು
we sit
ಮಾಡ್ಬಿಡೋದೇ?

– ಎನ್. ನಾಗರಾಜ

ಕರೆದು ದಾನವ ಮಾಡೆ...

– ಸತ್ಯವತಿ

ಬೇಡಾ, ಬೇಡಾ ಎಂದರೂ ಕೇಳದೆ, ಈ ಕಲಿಯುಗದಲ್ಲಿ 'ದಾನಕ್ಕಿಂತ ಮಿಗಿಲಾದ ಧರ್ಮವಿಲ್ಲ' ಎಂದು ಸಾರುತ್ತಾ, ದಾನ ಮಹಾ ಯಜ್ಞಕ್ಕೆ ಜಿಗಿದೇ ಬಿಟ್ಟಳು ಜಲಜ. ಯಾವುದೋ ಮಾತೆಯರ ಸಂಘದ ಸದಸ್ಯೆಯಾಗಿ, ಅವರ ಭೀಷಣವಾದ ಭಾಷಣಗಳಿಂದ ಪ್ರಭಾವಿತಳಾಗಿ 'ದಾನೇಶ್ವರಿ' (ದಾನವೇಶ್ವರಿ ಅಲ್ಲ) ಆಗಲು ಕಂಕಣ ತೊಟ್ಟೇಬಿಟ್ಟಳು ಈ ಏಣಾಕ್ಷಿ!

ಬೇಡುವವರರೆಗೆ ಕಾಯದೆ, ಅವರು ಬೇಡಾ ಎಂದು ದಾಕ್ಷಿಣ್ಯ ತೋರಿದರೂ ಬಿಡದೆ, ಕರೆಕರೆದು ದಾನವನ್ನು ನೀಡಬೇಕೆಂದು ಅವಳ ವಾದ.

ಇದೆಲ್ಲಾ ಯಾವ ಕಾಲಕ್ಕೆ ಸರಿಯಾಗಿತ್ತ್ತೋ ಕಾಣೆ! ಈ ಕಾಲಕ್ಕಂತೂ ಇದು ಒಪ್ಪುವ ವಿಚಾರವಲ್ಲ ಎಂದು ಎಷ್ಟು ರೀತಿಯಲ್ಲಿ ಹೇಳಿದರೂ ಆಕೆ ಕೇಳಲಿಲ್ಲ. ಧರ್ಮವು ಹೇಳುವ ಪ್ರಕಾರ ದಾನವು ಸರ್ವಕಾಲಕ್ಕೂ ಒಪ್ಪುವ ಕರ್ಮ(!) ಎಂದಾಕೆ ಪಟ್ಟುಹಿಡಿದ ಕಾರಣ, ನಾನು ತೆಪ್ಪಗೆ ಕುಳಿತೆ.

ಬೆಳಗಾಗಿ ಎದ್ದು ಈಗಿನ ಫ್ಯಾಶನ್ ಪ್ರಕಾರ ವಾಕಿಂಗ್ - ಜಾಗಿಂಗ್ ಎಲ್ಲಾ ಮಾಡ್ತಾ ಜಲಜಳ ಮನೆಗೆ ಬಂದರೆ, ಈಕೆ ಒಂದು ದೊಡ್ಡ ಬ್ಯಾಗನ್ನು ಶಾಲೆ ಮಕ್ಕಳಂತೆ ಬೆನ್ನಿಗೆ ಸಿಕ್ಕಿಸಿಕೊಂಡು ನನ್ನೊಂದಿಗೆ ಜಾಗಿಂಗ್ ಬರುವುದೇ? ಗೆಳತಿಯ ಈ ಪಜೀತಿ ಏನೆಂದು ಅರ್ಥವಾಗದೆ,

''ಏನೇ ಇದು ಗ್ರಹಚಾರ? ಬೆಳೆದ ಬೊಜ್ಜು ಸಾಲದೂಂತ ಇದೇನೇ ಇದು ಲಗ್ಗೇಜು?'' ಎಂದು ಕೇಳಿಯೇ ಬಿಟ್ಟೆ.

''ನೀನೇ ನೋಡ್ತಾ ಇರು ಗೊತ್ತಾಗುತ್ತೆ'' ರಹಸ್ಯವನ್ನು ಮತ್ತಷ್ಟು ಅಡಗಿಸಿಟ್ಟಳು ಜಲಜ.

ನಾವು ಜಾಗಿಂಗ್ ಮುಗಿಸಿ ಬರುವ ದಾರಿಯಲ್ಲಿ, 'ಅಮ್ಮನವರ ಗುಡಿ' ಎದುರು ಸಾಲುಸಾಲಾಗಿ ''ಅಮ್ಮಾ - ತಾಯೀ, ಕವಳ ಹಾಕ್ರಮ್ಮಾ'' ಎಂದು ಬೊಬ್ಬಿಡುವ ಭಿಕ್ಷುಕರ ಮೇಳವೇ ಇತ್ತು.

ಬೆಳಿಗ್ಗೆ ಬೇಗ ಆದ್ದರಿಂದ ಅವರಿನ್ನೂ ಎದ್ದೇ ಇರಲಿಲ್ಲ. ಅವರನ್ನೆಲ್ಲಾ 'ಓಯ್ ಓಯ್' ಅಂತ ಕರೆದು, ''ಇದನ್ನ ನೀವೆಲ್ಲಾ ಹಂಚಿಕೊಳ್ಳಿ'' ಎಂದು ಆ ಬ್ಯಾಗನ್ನೇ ಅವರ ಕೈಗಿತ್ತು ಹೆಮ್ಮೆಯಿಂದ ಮನೆಯ ಕಡೆ ಸಾಗಿದಳು ಜಲಜ,

ಹಿಂದಿರುಗಿ ನೋಡಿದಾಗ ಅದರಿಂದ ಸೀರೆ, ಶರ್ಟು ಇತ್ಯಾದಿಗಳನ್ನು ತೆಗೆದು, ಅವಕ್ಕಾಗಿ ಅವರುಗಳು ಕಿತ್ತಾಡುವುದು ಕಂಡಿತು.

ಮರುದಿನ ಪುನಃ ಅದೇ ದಾರಿಯಾಗಿ ಬಂದಾಗ ಇದ್ದಬದ್ದ ಭಿಕ್ಷುಕರೆಲ್ಲಾ ಜಲಜನ್ನ ಮುತ್ತಿಕೊಂಡು, ''ಅಮ್ಮಾ ಬಟ್ಟೆ ಕೊಡ್ರಮ್ಮಾ, ಬಟ್ಟೆ ತಾಯೇ, ದರಿದ್ರ ತಾಯೇ'' ಎಂದು ಊಳಿಡುತ್ತಾ, ಮೈಮೇಲೆ ಬೀಳತೊಡಗಿದಾಗ ಮಾತ್ರ ಜಲಜಳ ಪಾಡು ಯಾರಿಗೂ ಬೇಡ. ಹುಟ್ಟಿದಂದಿನಿಂದ ಜಳಕ ಕಾಣದ ಆ ಮಣ್ಣು ಮೈಗಳ ವಿಚಿತ್ರನಾತ ಒಂದು ಕಡೆ, ಪುರುಚಲು ಗಡ್ಡದ ಜಟಾಧಾರಿಗಳ ಕೆಂಗಣ್ಣಿನ ನೋಟ ಇನ್ನೊಂದು ಕಡೆ, ಇವಳ ಕೈಯನ್ನೇ ಎಳೆದಾಡುವ ಅವುಗಳ ದಾರ್ಷ್ಟ್ಯ ಮತ್ತೊಂದೆಡೆ! ಜಲಜ ಅವರಿಂದ ತಪ್ಪಿಸಿಕೊಳ್ಳಲಾಗದೆ ಅಳತೊಡಗಿದಾಗ ನನಗೆ ಕೈಕಾಲೇ ಆಡಲಿಲ್ಲ. ಅಷ್ಟರಲ್ಲಿ ಆ ಮುಂಜಾನೆಗೆ ಅಲ್ಲಿಗೆ ಬರುವ ಏಕೈಕ ವ್ಯಕ್ತಿ 'ಅರ್ಚಕರು' ದೇವರಂತೆ ಆಗಮಿಸಿದರು. ಭಿಕ್ಷುಕರನ್ನು ಗದರಿಸಿ, ಓಡಿಸಿ ಪುಣ್ಯ ಕಟ್ಟಿಕೊಂಡರು. ಇನ್ನೊಬ್ಬರಿಗೆ ಸಿಕ್ಕಿದಂಥಾ ಬಟ್ಟೆಯೇ ತಮಗೆ ಬೇಕಿತ್ತು ಎಂಬ ಕಾರಣಕ್ಕಾಗಿ ಅವರುಗಳು ಈ ರೀತಿ ಆಡಿದ್ದೆಂದು ಅರ್ಚಕರು ಮತ್ತೊಮ್ಮೆ ಭೆಟ್ಟಿಯಾದಾಗ ಹೇಳಿದರು. ಎಲ್ಲರಿಗೂ ಒಂದೇ ರೀತಿಯ ಯೂನಿಫಾಂ ದಾನಮಾಡಬೇಕಿತ್ತೇನೋ!

ಈ ಪ್ರಕರಣದಿಂದ ಹೆದರಿದ ಜಲಜ ಮತ್ತೆ ಆ ದಾರಿಯಾಗಿ ಹೋಗುವುದನ್ನೇ ಬಿಟ್ಟಳು, ಆದರೆ ದಾನ ಮಾಡುವ ಹುಚ್ಚನ್ನು ಮಾತ್ರ ಬಿಡಲಿಲ್ಲ. ಹಬ್ಬ, ಹುಣ್ಣಿಮೆ, ಹರಿದಿನ ಎಂದು ಏನಾದರೂ ಹಚ್ಚಿಕೊಂಡು ಸಿಕ್ಕ ಸಿಕ್ಕ ಪಾಪದವರಿಗೆ (1) ಸೀರೆ, ರವಿಕೆಕಣ, ಬಳೆ ಮುಂತಾದ ದಾನಗಳನ್ನು ಕೊಡತೊಡಗಿದಳು. ಅವಳ ಸತ್ಕೀರ್ತಿ ನನ್ನ ಕಿವಿಗೂ ಮುಟ್ಟಿ, ಅದಕ್ಕಾಗಿ ಆಕೆಯನ್ನು ಸ್ಪೆಶಲ್ ಆಗಿ ಅಭಿನಂದಿಸಲು ಅವಳ ಮನೆಗೆ ದೌಡಾಯಿಸಿದೆ.

ನನಗಿಂತಲೂ ಮೊದಲೇ ಆಗಮಿಸಿದ್ದ ಓರ್ವ ಮುತ್ತೈದೆ ಹೆಂಗಸು ಒಂದು ರೇಷ್ಮೆ ಸೀರೆಯನ್ನು ಜಲಜಳ ಕೈಗಿತ್ತು, ದುರ್ದಾನ ತೆಗೆದುಕೊಂಡವರಂತೆ ತಿರುಗಿಯೂ ನೋಡದೆ, ರಭಸದಿಂದ ನನ್ನನ್ನು ದಾಟಿ ಹೊರಗೆ ಹೋಯ್ತು, ಜಲಜಳು ಕಣ್ಣು ತುಂಬಾ ನೀರು ತುಂಬಿಕೊಂಡು ಕಲ್ಲಿನ ಗೊಂಬೆಯ ಹಾಗೆ ಕುಳಿತಿದ್ದಳು.

''ಯಾಕೆ? ಏನಾಯ್ತೇ?'' ಎಂಬ ನನ್ನ ಕಳಕಳಿಯ ದನಿಗೆ ಭೋರೆಂದು ಅಳುತ್ತಾ, ''ನೀನು ಹೇಳಿದ ಮಾತು ಕೇಳಿದ್ರೆ ಚೆನ್ನಾಗಿತ್ತು. ಆದರೆ ದಾನಮಾಡಿ, ಇಲ್ಲದವರನ್ನು ಸ್ವಲ್ಪವಾದರೂ ಉದ್ಧರಿಸಿ ಪುಣ್ಯ ಕಟ್ಟಿಕೊಳ್ಳಬೇಕೆಂಬ ಆಸೆಯಲ್ಲಿ

ನಿನ್ನ ಮಾತನ್ನು ಗಾಳಿಗೆ ತೂರಿದೆ. ಈಗ ನೋಡು, ಅನುಭವಿಸುತ್ತಿದ್ದೇನೆ'' ಎಂದು ಕೈಲಿದ್ದ ಸೀರೆಯನ್ನು ತೋರಿಸಿದಳು.

ಅರ್ಥವಾಗದೆ ಪಿಳಿ ಪಿಳಿ ಕಣ್ಣು ಬಿಟ್ಟೆ.

''ಗೊತ್ತಾಗ್ಲಿಲ್ವಾ? ನೋಡು, ಎರಡು ವಾರದ ಹಿಂದೆಯಷ್ಟೇ ಎರಡು ಸಾವಿರ ಕೊಟ್ಟು ಇದನ್ನ ತಂದೆ, ಗೌರಿಹಬ್ಬಕ್ಕೆ ಈ ಮುತ್ತೈದೆಗೆ ಕೊಟ್ಟೆ. ಏನೋ ಕಾರಣಕ್ಕೆ ಸೀರೆ ಒಗೆದರಂತೆ. ಬಾರ್ಡರ್ ಕಲರ್ ಮೈಗೆ ಅಂಟಿತಂತೆ. ಅದಕ್ಕೆ ಈ ಸೀರೇನ ನನಗೇ ಕೊಟ್ಟು ಹೋದರು'' ಜಲಜ ಬಿಕ್ಕಿದಳು. ದಾನಕೊಟ್ಟು ದೀನಳಾದಳಲ್ಲಾ ಈ ಜಲಜ!

''ಕತ್ತೆಗೇನು ಗೊತ್ತು ಕಸ್ತೂರಿ ಪರಿಮಳ? ರೇಷ್ಮೆ ಬದಲಿಗೆ ಪಾಲಿಯೆಸ್ಟರ್ ಸೀರೇನೇ ಕೊಡು'' ಎಂದು ಉಪದೇಶಿಸಿದೆ.

ಅಷ್ಟರಲ್ಲಿ ಆಚೆಮನೆಯ ಅಶ್ವತ್ಥಲಕ್ಷ್ಮಿ ಮಗಳು ಓಡಿ ಬಂದು, ಒಂದು ಚೆಂದದ ಪಾಲಿಯೆಸ್ಟರ್ ಸೀರೆಯನ್ನು ಬಾಗಿಲಲ್ಲಿ ನಿಂತೇ ಜಲಜಳಿಗೆ 'ರೊಯ್' ಎಂದು ಕ್ಯಾಚ್ ಕೊಟ್ಟಿತು.

''ಉದ್ದಾ - ಅಗಲ ಇಲ್ದಿರೋ ಸೀರೇನ ಕೊಡಬಾರದಂತೆ, ಇದನ್ನ ನೀವೇ ಇಟ್ಕೋಬೇಕಂತೆ'' ಎಂದು ನುಡಿದು ಮಾಯವಾಯ್ತು.

ಸೀರೆಯನ್ನು ಪರೀಕ್ಷಿಸಲಾಗಿ, ಅದರ ಮೇಲೆ ಐದೂವರೆ ಮೀಟರ್ ಎಂದು ಬರೆದಿದ್ದರೂ, ಸೀರೆಯ ನಿಜವಾದ ಉದ್ದ ಐದುಕಾಲು ಮೀಟರಾಗಿತ್ತು, ಇರಲಿ. ಇಲಿಯಂಥಾ ಪುಟ್ಟ ದೇಹದ ಅಶ್ವತ್ಥ ಲಕ್ಷ್ಮಿಗೆ ಇದು ಸಾಕಾಗಲಿಲ್ಲವೆಂದಮೇಲೆ ಇದರಲ್ಲೇನೋ ಚೋದ್ಯವೇ ಇರಬೇಕು.

ಅವರೆಲ್ಲಾ ಒಟ್ಟಿಗೆ ಮಾತಾಡಿಕೊಂಡಿರುವರೇನೋ ಎಂಬ ಅನುಮಾನ ಬರುವಂತೆ, ಅಥವಾ ಜಲಜಳೇ ಎಲ್ಲೋ ತಪ್ಪಿರುವಳೆಂಬ ಶಂಕೆ ಉಂಟಾಗುವಂತೆ, ಆಗಲೇ ಪುಟ್ಟಮ್ಮಕ್ಕನ ಆಗಮನವಾಯ್ತು.

ದಾಪುಗಾಲಿಕ್ಕುತ ಬಂದ ಆಕೆ ''ನನ್ನ ಯಾವ ಸೀರೆಗೂ ಮ್ಯಾಚ್ ಆಗ್ದೇ ಇರೋ ಈ ರವಿಕೆ ಕಣ ಇಟ್ಕೊಂಡು ಏನು ಮಾಡ್ಲಿ?'' ಎನ್ನುತ್ತಾ ಕಣವನ್ನು ಅಲ್ಲೇ ಒಗೆದು ಹೊರಟುಹೋದಳು.

ಇದೊಳ್ಳೇ ಫಜೀತಿ ಆಯ್ತಲ್ಲಾ! ಕಣದೊಂದಿಗೆ ಮ್ಯಾಚಿಂಗ್ ಸೀರೆನೂ ಕೊಡಬೇಕಿತ್ತೂಂತ ಕಾಣುತ್ತೆ. ನಮ್ಮಂಥಾ ಮಂಕುಮಂಡೆಗಳಿಗೆ ಅವೆಲ್ಲಾ ಹೊಳೀಬೇಕಲ್ಲಾ ಎಂದು ಆಲೋಚಿಸುತ್ತಿದ್ದಂತೆ, ನಮ್ಮ ಮನೆಯಲ್ಲಿ ನಡೆದ ಒಂದು ಘಟನೆಯ ನೆನಪಾಯ್ತು.

ಒಮ್ಮೆ ನಮ್ಮ ಹೊಸ ಕೆಲಸದವಳಾದ ಚೆನ್ನಿಗೆ, ತೆಂಗಿನ ಸಿಪ್ಪೆ, ಚಿಪ್ಪು, ಗರಿ, ಮನೆಯ ಮಾಡಿನ ಮೇಲೆ ಬರುತ್ತದೆಂದು ಕಡಿದ ಮಾವಿನ ಕೊಂಬೆ ರೆಂಬೆಗಳನ್ನು ಕೊಂಡು ಹೋಗಲು ಹೇಳಿದೆ, ಎಷ್ಟು ದಿನವಾದರೂ ಸೌದೆ ಡಿಪೋದೆದುರು ಶೋಭಿಸುವ ಕಟ್ಟಿಗೆಗಳಂತೆ ಇವು ಅಲ್ಲೇ ರಾರಾಜಿಸುತ್ತಿದ್ದವು. ವಿಚಾರಿಸಿದಾಗ 'ಅದನ್ನು ಹೇಗೆ ಕೊಂಡೊಯ್ಯುವುದು?' ಎಂಬ ಪ್ರಶ್ನೆ ಎದುರಾಯಿತು.

ಅರೆ ಹೌದಲ್ಲಾ! ನಾನೇ ಅವನ್ನು ಹಗ್ಗದಲ್ಲಿ ಕಟ್ಟಿ, ಮೂಟೆಯಲ್ಲಿ ತುಂಬಿ, ಅವಳ ಮನೆಗೆ ಕೊಂಡೊಯ್ಯಬೇಕಿತ್ತು! ನಂಗೇ ಹೊಳೀಲಿಲ್ಲ, ಪೆದ್ದಂಬಟ್ಟಿ ನಾನು!

ಅಂದೇ ಪಕ್ಕದ ಮನೆಯ ಕೆಲಸದವಳು ಸಿಗಲು, ''ಕಟ್ಟಿಗೆ ಬೇಕಾ?' ಎಂದು ಕೇಳಿದೆ. ಅದರ ಮೇಲೇ ಕಣ್ಣಿಟ್ಟುಕೊಂಡಿದ್ದ ಆಕೆ ಕೂಡಲೆ ಒಪ್ಪಿ, ಚೆನ್ನಿಯ ಎದುರಿಗೇ ಎಲ್ಲಾ ಕೊಂಡೊಯ್ದಳು. ಉಳಿದ ಸಣ್ಣಪುಟ್ಟವುಗಳನ್ನೆಲ್ಲಾ ಅಗ್ನಿಯಲ್ಲಿ ಹೋಮ ಮಾಡಿದೆ.

ಎರಡನೆಯ ಸಲ ನಾನು 'ಹೋಮ'ಕ್ಕೆ ಅಣಿಮಾಡಿ, ಕಸಕಡ್ಡಿಗಳೊಂದಿಗೆ ತೆಂಗಿನ ಸಿಪ್ಪೆ, ಚಿಪ್ಪುಗಳನ್ನು ಒಯ್ಯುವಾಗ, ಸುಂಟರಗಾಳಿಯಂತೆ ಬಂದ ಚೆನ್ನಿ ''ಇದನ್ನ ಬೆಂಕಿಗೆ ಹಾಕ್ಬೇಡಿ, ನನಗೇ ಬೇಕು'' ಎನ್ನುತ್ತಾ ಕೈಯಿಂದ ಎಳೆದುಕೊಂಡೇ ಹೋದಳು.

ಈ ವಿಷಯವನ್ನು, ತಲೆ ಮೇಲೆ ಕೈ ಹೊತ್ತು ಕುಳಿತ ಜಲಜಾಗೆ ತಿಳಿಸಿ, ''ಲೇ ಜಲಜೂ, ನೀನು ಒಂದು ಕೆಲಸ ಮಾಡು. ನೀನು ಏನೇನು ದಾನ ಮಾಡ್ಬೇಕು ಅಂತ ಇದೀಯೋ, ಅದನ್ನೆಲ್ಲಾ ತುಳಸಿದಳ ಹಾಕಿ ಎತ್ತಿಡು, ಅನಾಥಾಶ್ರಮದ ಅಡ್ರೆಸ್ ತರ್ತೀನಿ. ಅಲ್ಲಿಗೇ ಎಲ್ಲಾ ದಾನ ಮಾಡು, ಯಾರಾದ್ರೂ ಉಪಯೋಗಿಸಿಕೊಳ್ತಾರೆ'' ಎಂದು ಸಮಾಧಾನಪಡಿಸಿದೆ.

ಅವಳಿಗೂ ಅದು ಸರಿ ಕಂಡಿತು. ಮುಂದೊಂದು ಹಬ್ಬದ ದಿನ ಪೂಜೆ ಮಾಡಿ, ಸುತ್ತಮುತ್ತಲದವರಿಗೆ ಅರಿಶಿನ-ಕುಂಕುಮ, ಹೂವು ಮಾತ್ರ ಕೊಟ್ಟು ಸೀರೆ-ರವಿಕೆ ಕಣಗಳಿಗೆ ತುಳಸಿದಳ ಹಾಕಿ ಎತ್ತಿಟ್ಟು ಬಂದಳು ಜಲಜ, ರಾಶಿ ರಾಶಿ ಸೀರೆಗಳು ಒಳ ಸೇರುವುದನ್ನು ಕಂಡು ಗುಸು-ಪಿಸು ಶುರುವಾಯ್ತು.

''ಏನ್ರೀ ಜಲಜಮ್ಮಾ, ಈವತ್ತು ವಸ್ತ್ರದಾನ ಇಲ್ವಾ?'' ಒಬ್ಬಾಕೆ ಪ್ರಶ್ನಿಸಿಯೇಬಿಟ್ಟಳು.

''ಯಾಕಿಲ್ಲ? ಆಮೇಲೆ ಆಶ್ರಮಕ್ಕೆ ಹೋಗಿ ಕೊಟ್ಟು ಬರ್ತೀನಿ'' ಜಲಜ ಉವಾಚ.

''ಆಶ್ರಮ? ಯಾಕ್ರೀ, ನಾವೆಲ್ಲಾ ಇಷ್ಟು ಜನ ಮುತ್ತೈದೆಯರಿರೋವಾಗ ಅವರಿಗೆ ಯಾಕೆ? ಅಂಥವರಿಗೆ ಕೊಡೋಕೆ ಸರಕಾರ, ಸಂಘ-ಸಂಸ್ಥೆಗಳಿಲ್ವಾ?'' ಮತ್ತೊಬ್ಬಳ ವ್ಯಾಖ್ಯಾನ.

''ದಾನಾನ ನಮ್ಮಂಥೋರಿಗೆ ಕೊಟ್ಟರೇ ಪುಣ್ಯ'' ಪುಣ್ಯವತಿಯೊಬ್ಬ ಒಗ್ಗರಣೆ.

''ಅಮ್ಮೋರೇ ನಂಗೂ ಸೀರೆ ಇಲ್ವಾ?'' ಎಲ್ಲಾ ನೋಡುತ್ತಾ ನಿಂತಿದ್ದ ಮನೆಗೆಲಸದ ರುಕ್ಕಿ, ಪ್ರಶ್ನಾ ರೂಪದಲ್ಲಿ ಬೇಡಿಕೆಯನ್ನು ಮುಂದಿಟ್ಟಳು. ಹಿಂದೆ ಜಲಜ ಕೊಟ್ಟ ಸೀರೆಯನ್ನು ನೋಡಿ ''ಅಜ್ಜೀರು ಉಡೋ ಸೀರೆ'' ಎಂದು ಟೀಕಿಸಿ, ಐವತ್ತೆಂಟು ವರ್ಷದ ನವಯುವತಿ ರುಕ್ಕಿ, ಆ ಸೀರೇನ ಕೈಯ್ಯಲ್ಲೂ ಮುಟ್ಟಿರಲಿಲ್ಲ. ಈಗೇಕೆ ಪುನಃ ಆಸೆ ಬಂತೋ?

''ಇಲ್ಲ ನಿಮ್ಮೆಲ್ಲರ ಇಷ್ಟಕ್ಕೆ ಸರಿಯಾಗಿ ಬಟ್ಟೆ ಆರಿಸೋಕೆ ನನಗೆ ಬರಲ್ಲ. ನಾನಷ್ಟು ಜಾಣೆ ಅಲ್ಲ. ನಿಮಗೆಲ್ಲಾ ಸುಮ್ಮನೆ ನನ್ನಿಂದ ತೊಂದ್ರೆ, ಯಾಕೆ? ಮುದುಕೀರು ಉಡೋ ಸೀರೇನೆ ಆಗ್ಲಿ, ಹುಡ್ಗೀರು ಉಡೋ ಸೀರೇನೋ ಆಗ್ಲಿ, ಉದ್ದ ಇರಲಿ ಇಲ್ಲದಿರಲಿ, ಬಣ್ಣ ಹೋಗಲಿ ಹೋಗದೇ ಇರಲಿ, ಮ್ಯಾಚಿಂಗ್ ಆಗಲಿ ಆಗದೇ ಇರಲಿ, ಯಾರಾದರೂ ಅಡ್ಜೆಸ್ಟ್ ಮಾಡಿಕೊಂಡು ಉಪಯೋಗಿಸುತ್ತಾರೆ ಅಲ್ಲಿ. ನಿಮ್ಗೆಲ್ಲಾ ಇನ್ನು ಮುಂದೆ ಕಾಟ ಕೊಡಲ್ಲ ನಾನು'' ಎಂದಳು ಜಲಜ.

''ಛೆ ಛೆ! ನೀವು ಕೊಡೋದು ಯಾವಾಗಲೂ ಚೆನ್ನಾಗೇ ಇರುತ್ತೆ. ಯಾರೋ ಏನೋ ಅಂದ್ರೂಂತ ಬೇಜಾರು ಮಾಡ್ಕೋಬೇಡ್ರೀ ಜಲಜಾ. ಸುಮ್ಮನೆ ಇಲ್ಲಿ ಇರೋರ್ಗೇನೇ ದಾನ ಮಾಡಿಬಿಡ್ರಿ. ಆಶ್ರಮ-ಗೀಶ್ರಮ ಅಂತ ಯಾಕೆ ಅಲೆದು ಪಾಡುಪಡ್ತೀರ?'' ಅಶ್ವತ್ಥಲಕ್ಷ್ಮಿಯ ಆದೇಶ?!

'ಪರರಿಗೆ ನೀಡಿದ್ದು ಪರಮ ಶ್ರೇಷ್ಠ; ತನಗಿತ್ತಿದ್ದು ಅತ್ಯಂತ ನಿಕೃಷ್ಟ' ಎಂದು ಭಾವಿಸುವ 'ನಿತ್ಯ ಅಸಮಧಾನಿ'ಗಳನ್ನು ಕಂಡೇ ಹಿರಿಯರು ''ಪಾತ್ರಾಪಾತ್ರರನ್ನು ನೋಡಿ ದಾನಮಾಡು' ಎಂದು ಎಚ್ಚರಿಸಿರಬೇಕು.

ಹೀಗೆಂದು ಭಾವಿಸಿದ ಜಲಜ, ತನ್ನಂತೆ ದಾನಾಸಕ್ತರಾದ ಸಂಘದ ಸದಸ್ಯೆಯರಿಗೆಲ್ಲಾ,

ಕರೆದು ದಾನವ ಮಾಡಿದರೆ ಕರಕರಿ ಮಾಡಿ
ಕೆರದಲ್ಲಿ ಹೊಡೆಯಬರುವರು!
ಕಿರಿಕಿರಿಯು ಬೇಡಾದರೆ, ಬೇಡಿ ಪರಿ
ಪರಿಯಲಿ ಪೊಡಮಡುವಗೆ ನೀಡುವುದು॥

ಎಂಬ ಬಿಟ್ಟಿ ಉಪದೇಶವನ್ನು ಸರಾಗವಾಗಿ ನೀಡುತ್ತಿದ್ದಳು.

★ ★ ★

ನರಪ್ರೇತಲ

- ಅಣ್ಣಾಸ್ವಾಮಿ ಮೊದಲಿಯಾರ್

ನಾನು ಒಂದು ಖಾಸಗಿ ಕಂಪೆನಿಗೆ ದೊಡ್ಡ ಅಧಿಕಾರಿಯ ಕೆಲಸಕ್ಕೆ ಸೇರಿದ ಹೊಸದು. ಅದು ಐವತ್ತು ಎಕರೆ ವಿಸ್ತೀರ್ಣವಿರುವ ದೊಡ್ಡ ಕಂಪೆನಿ. ಒಂದೊಂದು ವಿಭಾಗಗಳೂ ಬೃಹತ್ತಾಗಿತ್ತಲ್ಲದೆ, ಒಂದೊಂದಕ್ಕೂ ನಡುವೆ ಬಹಳ ದೊಡ್ಡ ವಿಶಾಲವಾದ ಹೂತೋಟಗಳಿದ್ದವು. ಅಲ್ಲಾಯ್ ವಿಭಾಗ, ಆಕ್ಸೈಡ್ ವಿಭಾಗಗಳಲ್ಲಿ ಹೆಚ್ಚು ರಾಸಾಯನಿಕ ಕ್ರಿಯೆಗಳಿದ್ದ ಕಾರಣ ಮುಖ್ಯ ಕಟ್ಟಡದ ಹಿಂಭಾಗದಲ್ಲಿ ಬಹಳ ದೂರದಲ್ಲಿದ್ದವು. ಅಲ್ಲಿಗೆ ಹೋಗಲು ಡಾಂಬರು ರಸ್ತೆಗಳಿದ್ದವು. ಅಲ್ಲಿ ಕೆಲಸ ಮಾಡುವ ಕಾರ್ಮಿಕರನ್ನು ಬಿಟ್ಟರೆ ಬೇರೆ ಯಾರು ಹಗಲು ಹೊತ್ತು ಆ ಕಡೆ ಹೋಗುತ್ತಿರಲಿಲ್ಲ. ನಾನು ಕೆಲಸಕ್ಕೆ ಸೇರಿ ಆರು ತಿಂಗಳಾಗಿದ್ದರೂ ಯಾರೂ ಗೆಳೆಯರಾಗಿರಲಿಲ್ಲ. ಎದುರಿಗೆ ಬಂದಾಗ 'ಹಲೋ' ಎನ್ನುವ ಪರಿಚಯ ಅಷ್ಟೇ.

ನಾನು ಮೂರು ಷಿಫ್ಟ್‌ನಲ್ಲಿ ಕೆಲಸ ಮಾಡಬೇಕಾಗಿತ್ತು. ನನ್ನ ಷಿಫ್ಟ್‌ನಲ್ಲಿ ನಾನೇ ಮುಖ್ಯಾಧಿಕಾರಿ ಹೀಗಾಗಿ ಎಲ್ಲಾ ಜವಾಬ್ದಾರಿ ನನದೇ ಆಗಿತ್ತು. ಇನ್ನೂ ಚಿಕ್ಕ ವಯಸ್ಸು ಕೆಲಸ ಮಾಡುವ ಉತ್ಸಾಹ. ರಾತ್ರಿ ಷಿಫ್ಟ್‌ನಲ್ಲಿ ಕಂಪೆನಿಯ ಎಲ್ಲಾ ವಿಭಾಗಗಳಿಗೂ ಹೋಗಿ, ಸರಿಯಾಗಿ ಕೆಲಸ ನಡೆಯುತ್ತಿದೆಯೇ? ಯಾರಾದರೂ ನಿದ್ರೆ ಮಾಡುತ್ತಿದ್ದಾರೆಯೇ? ಕೆಲಸ ಮಾಡದೆ ಕತೆ-ಕಾದಂಬರಿ ಪುಸ್ತಕಗಳನ್ನು ಓದುತ್ತಿದ್ದಾರೆಯೇ? ಹುಲಿಘಟ್ಟ ಆಟ ಆಡುತ್ತಿದ್ದಾರೆಯೇ? ಮಲಗಿ ನಿದ್ರೆ ಮಾಡುತ್ತಿದ್ದಾರೆಯೇ? ಎಂದು ಉಸ್ತುವಾರಿ ನೋಡಿಕೊಂಡು ಬರುವುದು ನನ್ನ ವಾಡಿಕೆ.

ಆದಿನ ಭೀಮನ ಅಮಾವಾಸ್ಯೆ - ಸೂರ್ಯ ಗ್ರಹಣದ ದಿನ. ಅಪಹರಣಕಾರರಿಗೆ, ಕಳ್ಳಕಾರರಿಗೆ ಪ್ರಶಸ್ತವಾದ ದಿನ. ಕಂಪೆನಿಯ ಎಲ್ಲಾ ವಿಭಾಗಗಳ ಮೇಲ್ವಿಚಾರಣೆ ನಡೆಸಿ ಮುಖ್ಯ ಕಟ್ಟಡದ ಹಿಂಭಾಗದಲ್ಲಿ ದೂರದಲ್ಲಿದ್ದ ಆಕ್ಸೈಡ್‌ಮಿಲ್ ವಿಭಾಗದ ಕಡೆಗೆ ಹೊರಟೆ. ಆಗ ರಾತ್ರಿ ಹನ್ನೆರಡು ಗಂಟೆ ದಾಟಿತ್ತು. ಈ ಆಕ್ಸೈಡ್‌ಮಿಲ್ ವಿಭಾಗವಿರುವ ಸ್ಥಳದಲ್ಲಿ ಮೊದಲು ಹಿಂದೂ ರುದ್ರಭೂಮಿ ಇತ್ತೆಂದೂ, ಈಗಲೂ ಆಗಾಗ ದೆವ್ವ ಮೋಹಿನಿಗಳ ಸಂಚಾರವಿರುತ್ತದೆಂದೂ ಕಾರ್ಮಿಕರು ಹೇಳುತ್ತಿದ್ದರು. ಅದನ್ನು ಕಟ್ಟುವಾಗ ಭೂಮಿಯಲ್ಲಿ ಅಸ್ಥಿಪಂಜರಗಳು ಸಿಕ್ಕಿದವೆಂದೂ, ಅಮಾವಾಸ್ಯೆ ದಿನ

ಅರ್ಧರಾತ್ರಿಯಲ್ಲಿ ಅಸ್ಥಿಪಂಜರಗಳು ಗಾಳಿಯಲ್ಲಿ ತೇಲಾಡುತ್ತಾ ಓಡಾಡುತ್ತವೆಯೆಂದೂ ನನಗೆ ಹೆದರಿಸಿದ್ದರು. ''ಇವೆಲ್ಲಾ ಸುಳ್ಳು ಪುರಾಣ, ಅಲ್ಲಿ ರಾತ್ರಿ ಹೊತ್ತು ಭಂಗಿ ಸೇದುವವರು, ಇಸ್ಪೀಟು ಆಡುವವರು, ಮಲಗಿ ನಿದ್ರೆ ಮಾಡುವವರು, ಮೋಜಿನ ಹರಟೆ ಹೊಡೆಯುವವರು, ನಾಟಕದ ರಿಹರ್ಸಲ್ ಮಾಡುವವರು ಸೇರುತ್ತಾರೆ'' ಅಂತ ಸೆಕ್ಯೂರಿಟಿ ವಿಭಾಗದ ಮುಖ್ಯಸ್ಥ ಜನಾರ್ಧನರಾವ್ ಹೇಳಿದ್ದರು. ಈ ದಿನ ಆಕಸ್ಮಿಕವಾಗಿ ಅಲ್ಲಿಗೆ ಹೋಗಿ ನಿಜಾಂಶ ತಿಳಿಯಬೇಕೆಂದು, ತಪ್ಪಿತಸ್ತರನ್ನು ಹಿಡಿದು ಶಿಕ್ಷಿಸಬೇಕೆಂದು ನಿರ್ಧರಿಸಿದೆ.

ದೂರದಲ್ಲಿ ಆಕ್ಸೈಡ್‌ಮಿಲ್ ಯಂತ್ರ ಬ್ರಹ್ಮರಾಕ್ಷಸನ ಹಾಗೆ ಭಯಂಕರ ಶಬ್ದ ಮಾಡುತ್ತಿತ್ತು. ಮುಖ್ಯ ಕಟ್ಟಡದಿಂದ ಹೊರಟ ನಾನು ಅರ್ಧ ದಾರಿಗೆ ಹೋಗಿರಬಹುದು. ರಸ್ತೆ ನಿರ್ಜನವಾಗಿತ್ತು. ಇದ್ದಕ್ಕಿದ್ದಂತೆ ಕರೆಂಟ್ ಹೋಯಿತು - ಕತ್ತಲೋ ಕತ್ತಲು. ನನ್ನ ಮುಂದೆ ಒಂದಡಿ ದೂರದಲ್ಲಿ ಏನಿದೆ ಕಾಣುತ್ತಿರಲಿಲ್ಲ. ಎಲೆಕ್ಟ್ರೀಷಿಯನ್ ಜನರೇಟರ್ ಚಾಲು ಮಾಡಲು ಕಾಲು ಗಂಟೆಯಾದರೂ ಬೇಕು. ನಕ್ಷತ್ರಗಳ ಬೆಳಕನ್ನು ಬಿಟ್ಟರೆ ಬೇರೆ ಬೆಳಕಿಲ್ಲ. ಹೀಗಾಗುತ್ತದೆಂದು ನಿರೀಕ್ಷಿಸಿದ್ದರೆ ಸೆಕ್ಯೂರಿಟಿಯಿಂದ ಹ್ಯಾಂಡ್ ಟಾರ್ಚ್ ತರುತ್ತಿದ್ದೆ ನಕ್ಷತ್ರಗಳ ಬೆಳಕಿನಲ್ಲಿ ಕತ್ತಲಿಗೆ ಕಣ್ಣುಗಳ ದೃಷ್ಟಿಯನ್ನು ಹೊಂದಿಸಿಕೊಳ್ಳತೊಡಗಿದೆ.

ಎದುರಿಗೆ ಸ್ವಲ್ಪ ದೂರದಲ್ಲಿ ಆಕೃತಿಯೊಂದು ಬರುತ್ತಿತ್ತು. ಆರಡಿ ಎತ್ತರ, ಉದ್ದನೆಯ ಕಾಲುಗಳು, ಗಾಳಿಯಲ್ಲಿ ತೂರಾಡುವ ಕೈಗಳು. ಮಿಣುಕು ಹುಳುಗಳ ಹಾಗೆ ಮಿಂಚುವ ದೊಡ್ಡದೊಂದು ಕಣ್ಣುಗಳು. ಗಾಳಿಯಲ್ಲಿ ತೇಲಾಡಿದಂತೆ ತೂರಾಡುತ್ತಾ ಬರುತ್ತಿತ್ತು. 'ಅಮಾವಾಸ್ಯೆಯ ದಿನ ಅಸ್ಥಿಪಂಜರದ ಓಡಾಟ!'' ನೆನಪಿಗೆ ಬಂತು. ನನಗೆ ಗಂಡೆದೆ - ಕಲ್ಲೆದೆ ದಸಕ್ಕೆಂದಿತು! ಕೈಕಾಲುಗಳು ನಡುಗಿದವು. ಅಲ್ಪ ಸ್ವಲ್ಪ ಅಪ್ಪನ ಬಲವಂತಕ್ಕೆ ಕಲಿತ ಗಾಯಿತ್ರಿ ಮಂತ್ರವು ಮರೆತು ಹೋಯಿತು. ಯಾವ ದೇವರ ಹೆಸರೂ ನಾಲಿಗೆಯಲ್ಲಿ ಬಾರದಾಯಿತು. ದೇವಾಲಯಗಳಿಗೆ ಹೋಗಿ ಅಭ್ಯಾಸವಿದ್ದರೆ ತಾನೇ! ಭಯಕ್ಕೆ ಅಲುಗಾಡದೆ ನಿಂತೆ. ಆಕೃತಿ ನನಗೆ ತೀರ ಹತ್ತಿರವಾದಾಗ ನನ್ನ ಎದೆ ನಗಾರಿ ಬಾರಿಸತೊಡಗಿತು. ಅಯ್ಯಯ್ಯೋ ದೆವ್ವ! ದೆವ್ವ!! ಚೀರಿದೆ.

''ಅಯ್ಯೋ ಅಮ್ಮಾ ಸತ್ನಲ್ಲೇ!'' ಎಂದು ಭೀಕರವಾಗಿ ಅರಚಿದ ದೆವ್ವ ವೇಗವಾಗಿ ಬಂದು ನನ್ನ ಮೇಲೆ ಎರಗಿತು. ನನಗೆ ಡಿಕ್ಕಿ ಹೊಡೆದು ಅಪ್ಪಳಿಸಿತು. ನಾನು ಅರಳೇ ಪೇಟೆ ಗರಡಿಯಲ್ಲಿ ನಾಲ್ಕು ವರ್ಷ ಸಾಮು ಮಾಡಿದ ಶಕ್ತಿಯನ್ನು

ದೇಹದಲ್ಲಿ ಒಗ್ಗೂಡಿಸಿ ಆ ದೆವ್ವವನ್ನು ಬಲವಾಗಿ ದೂರ ತಳ್ಳಿ ದಿಕ್ಕು ತೋಚಿದ ಕಡೆ ಜೋರಾಗಿ ಓಡಿದೆ.

ಕತ್ತಲಲ್ಲಿ ಏನನ್ನೋ ಎಡವಿದೆ, ಮುಗ್ಗರಿಸಿ ಬಿದ್ದೆ. ಜ್ಞಾನ ತಪ್ಪಿತು. ನನಗೆ ಎಚ್ಚರಿಕೆಯಾದಾಗ ಆಸ್ಪತ್ರೆಯಲ್ಲಿದೆ. ಕೆಂಡದಂತ ಜ್ವರ. ಒಂದು ವಾರವಾದರೂ ಜ್ವರ ಬಿಡಲಿಲ್ಲ. ನನ್ನ ತಂದೆ ಮೈಸೂರು ರಸ್ತೆಯಲ್ಲಿರುವ ಗಾಳಿ ಆಂಜನೇಯಸ್ವಾಮಿ ಗುಡಿಗೆ ಹೋಗಿ ನಿಂಬೆ ಹಣ್ಣು ಮಂತ್ರಿಸಿಕೊಂಡು, ತಾಯತ ಯಂತ್ರ ತಂದರು. ನಿಂಬೆ ಹಣ್ಣು ನನ್ನ ತಲೆದಿಂಬಿನ ಕೆಳಗಿಟ್ಟು, ಹಣೆಗೆ ಭಂಡಾರ ಹಚ್ಚಿ ತೋಳಿಗೆ ತಾಯತ ಕಟ್ಟಿದರು. ನನ್ನ ಅಜ್ಜಿ ವಾರ್ಡಿನ ಬಾಗಿಲು ಹಾಕಿ, ಒಂದು ತಟ್ಟೆಯಲ್ಲಿ ಹರಸಿನ ನೀರು ಮಾಡಿ ಎಲೆ ಅಡಿಕೆ ಹಾಕಿ, ಒಂದೆರಡು ಕೆಂಡ ಹಾಕಿ ಒಂದು ವೀಳೆದೆಲೆಯ ಮೇಲೆ ಕರ್ಪೂರವಿಟ್ಟು ಅದನ್ನು ಹೊತ್ತಿಸಿ ಆರತಿ ಬೆಳಗಿದರು. ಹರಸಿನ ನೀರು ರಕ್ತದಂತೆ ಕೆಂಪಾಯಿತು.

''ಮಗೂಗೆ ಗ್ರಹದ ಕಾಟವಿತ್ತು, ಅಮಾವಾಸ್ಯೆ ದಿನ ಅರ್ಧರಾತ್ರೀಲಿ ಬಿದ್ದಿದ್ದಾನೆ. ಇನ್ನು ಹೋಯಿತು. ಭಯವಿಲ್ಲ'' ಅಂದರು.

ಡಾಕ್ಟರ ಔಷಧದ ಮಹಿಮೆಯೋ! ಆಂಜನೇಯ ತಾಯತ ಯಂತ್ರದ ಮಹಿಮೆಯೋ! ಅಜ್ಜಿ ದೃಷ್ಟಿದೋಷ ತೆಗೆದ ಕಾರಣವೋ! ಅಂತೂ ಜ್ವರ ನಿಂತಿತು. ನಾನು ಸುಧಾರಿಸಿಕೊಳ್ಳತೊಡಗಿದೆ.

ಒಂದು ದಿನ ಮಟ ಮಟ ಮಧ್ಯಾಹ್ನ ಊಟಮಾಡಿ ನಿದ್ರೆ ಮಾಡ್ತಿದ್ದೆ. ದಢಾರನೆ ವಾರ್ಡ್ ಬಾಗಿಲು ತೆಗೆದುಕೊಂಡಿತು ಒಂದು ಆಕೃತಿ ಒಳಗೆ ಬಂದಿತು. ಬಾಗಿಲುದ್ದಕ್ಕೂ ನಿಂತುಕೊಂಡಿತು.

ಅಮಾವಾಸ್ಯೆಯ ದಿನ ರಾತ್ರಿ ಕಂಡ ದೆವ್ವದ ನೆನಪಾಯಿತು. ಆಂಜನೇಯನ ಯಂತ್ರ ಮುಟ್ಟಿ ನೋಡಿಕೊಂಡೆ. ಆ ಆಕೃತಿಯ ಹಿಂದಿನಿಂದ ನನ್ನ ಆಫೀಸ್ ಅಸಿಸ್ಟೆಂಟ್ ನಿಶಿತಾ ಒಳಗೆ ಬಂದರು. ನನ್ನ ಆರೋಗ್ಯದ ಬಗ್ಗೆ ವಿಚಾರಿಸಿ ಕೆಲವು ಮುಖ್ಯವಾದ ಪತ್ರಗಳಿಗೆ ನನ್ನ ಸಹಿ ತೆಗೆದುಕೊಂಡರು. ಅನಂತರ ಆ ನೀಳಕಾಯದ ಕಡೆ ಕೈ ತೋರಿಸಿ

''ಇವರು ಆಕ್ಸೈಡ್ ಮಿಲ್ ಸೂಪರ್‌ವೈಸರ್ ಭೀಮಾಚಾರಿ ಅಂತ'' ಎಂದು ಪರಿಚಯ ಮಾಡಿಸಿದರು. ಭೀಮಾಚಾರಿ ನನಗೆ ನಮಸ್ಕಾರ ಹೇಳಿದ ನಾನು ಪ್ರತಿ ವಂದನೆ ಮಾಡಿದೆ. ಭೀಮಾಚಾರಿ ಒಂದು ಹೂವಿನ ಗುಚ್ಛ ನನ್ನ ಕೈಗಿಟ್ಟು

'ವಿಷ್‌ಯು ಸ್ಪೀಡಿ ರಿಕವರಿ ಸರ್' ಅಂದ. ಒಂದು ಸಣ್ಣ ಬುಟ್ಟಿ ತುಂಬ ಸೇಬು, ಮೋಸಂಬಿ, ದ್ರಾಕ್ಷಿ, ದಾಳಿಂಬೆ ಮೊದಲಾದ ಹಣ್ಣುಗಳನ್ನು ತಂದಿದ್ದ. ಅದನ್ನು ನನ್ನ ಮಂಚದ ಪಕ್ಕದ ಮೇಜಿನ ಮೇಲಿಟ್ಟ.

''ಸರ್. ಇವರು ತುಂಬ ಗಿಲ್ಟಿಯಾಗಿದ್ದಾರೆ. ಇವರು ಆ ದಿನ ರಾತ್ರಿ ನಿಮಗೆ ಕತ್ತಲಲ್ಲಿ ಡಿಕ್ಕಿ ಹೊಡೆದ ಕಾರಣ ನಿಮಗೆ ಹೀಗಾಗಿದೆಯೆಂದು ತುಂಬ ಪಶ್ಚಾತ್ತಾಪ ಪಡ್ತಿದ್ದಾರೆ. ನಿಮಗೆ ಆರೋಗ್ಯ ಎಂದಿನಂತಾಗಲಿ ಅಂತ ರಾಯರ ಗುಡಿಗೆ ಹೋಗಿ ಹೋದ ಗುರುವಾರ ನೂರೆಂಟು ಪ್ರದಕ್ಷಿಣೆ ಮಾಡಿದ್ದಾರೆ'' ಎಂದು ಕೋಗಿಲೆಯ ಧ್ವನಿಯಲ್ಲಿ ನಿಸಿತಾ ನಗುತ್ತಾ ಹೇಳಿದಳು. ನನಗೂ ನಗು ಬಂತು. ಈ ನರಪೇತಲನ ಹೆಸರು ಭೀಮಾಚಾರಿ ಅಂತ ಗೊತ್ತಾದಾಗ. ಅವನು ಪೆಚ್ಚಾಗಿ ಗಾಬರಿಯಿಂದ ನಿಂತಿದ್ದ. ನನ್ನ ಮತ್ತು ಭೀಮಾಚಾರಿಯ ಮೊದಲ ಪರಿಚಯ ಹೀಗಾಯಿತು.


ನೆಕ್‌ಲೆಸ್‌

ನೀನೋ ನೆಕ್‌ಲೆಸ್
ನಿನಗ್ಯಾಕೆ ನೆಕ್‌ಲೇಸ್?

ಲ್ಯಾಪ್‌ ಟಾಪ್‌

ತಾಯಿಯ ತೊಡೆಯ ಮೇಲೆ ಕುಳಿತು
ಮಗ್ಗಿ ಹೇಳುತ್ತಿದ್ದ ಮಗುವನ್ನು ನೋಡಿ
ಕಾನ್ವೆಂಟಿನ ಕಿರಣ್ ಕೂಗಿದ್ದ
ಮಮ್ಮೀ ನೋಡು ಬಾ ಲ್ಯಾಪ್ ಟಾಪ್ ಕಂಪ್ಯೂಟರ್

– ಎನ್‌. ನಾಗರಾಜ



ಪ್ರಯಾಣದಲ್ಲಿಯ ರಸ ನಿಮಿಷಗಳು

– ಎಂ.ಸಿ. ಅಂಟಿನ

1. ನನ್ನ ತಾಯಿಯ ನೆನಪು ಚಿಗುರಿಸಿದಾಕೆ

ಮೊನ್ನೆ ಬೆಂಗಳೂರು ನಗರ ಸಾರಿಗೆ ಬಸ್ಸಿನಲ್ಲಿ ನಡೆದ ಘಟನೆ ಇದು.

ನಾನು ಕೋರಮಂಗಲಕ್ಕೆ ಹೋಗುವ 48ನೇ ನಂಬರಿನ ಪುಷ್ಪಕ ಬಸ್ಸಿನಲ್ಲಿ ಪಯಣಿಸುತ್ತಿದ್ದೆ. ಬಸ್ಸು ತುಂಬಿತ್ತು. ಹಲವರು ನಿಂತುಕೊಂಡಿದ್ದರು.

ಬಸ್ಸು ವೇಗವಾಗಿ ಓಡುತ್ತಿರುವಾಗ ದಾರಿಯಲ್ಲಿ ಅಕಸ್ಮಾತ್ತಾಗಿ ವಾಹನ ಚಾಲಕನು ಬ್ರೇಕ್ ಹಾಕಿದ್ದರಿಂದ, ನನ್ನ ಬಳಿಯಲ್ಲಿ ನಿಂತ ಯುವತಿಯೊಬ್ಬಳ ತೂಕ ತಪ್ಪಿತು. ಮೇಲೆ ಕಂಬಿ ಹಿಡಿದ ಅವಳ ಕೈ ಹಿಡಿತ ಕಳೆದುಕೊಂಡಿತು. ಪರಿಣಾಮವಾಗಿ ಅವಳ ಮೊಳಕೈ ನನ್ನ ತಲೆಯ ಮೇಲೆ ರಪ್ಪೆಂದು ಬಿದ್ದಿತು. ನೋವನ್ನು ತಾಳಲಾರದೆ ನನ್ನ ಬೋಳು ತಲೆಯನ್ನು ಹಿಡಿದುಕೊಂಡು ಕುಳಿತೆ.

ಬಲವಾಗಿ ಬಿದ್ದ ಪೆಟ್ಟಿನಿಂದ ನಾನು ತನ್ನ ಮೇಲೆ ಕೋಪಿಸಿಕೊಳ್ಳಬಹುದೆಂದು ತಿಳಿದ ಆ ಯುವತಿ ತನ್ನೆರಡೂ ಕೈಗಳನ್ನು ಜೋಡಿಸಿ ''ಕ್ಷಮಿಸಿ ಸಾರ್. ತಾವು ನನ್ನ ತಂದೆಯ ಸಮಾನರಾಗಿದ್ದೀರಿ ತಪ್ಪು ತಿಳಿದುಕೊಳ್ಳಬೇಡಿ. ಪಾಪ, ಬಹಳ ನೋವಾಯಿತೇ ಸಾರ್?'' ಎಂದು ಕಾಳಜಿ ಮಾಡಿದಳು.

ನಾನು ತಲೆಯ ಮೇಲಿನ ಕೈಯನ್ನು ತೆಗೆದು, ''ನೀವೇನೇ ತಿಳಕೊಳ್ಳಿಯಮ್ಮಾ, ನಿಮ್ಮ ಹೊಡೆತ ನನ್ನ ತಾಯಿಯ ನೆನಪನ್ನು ನನಗೆ ತಂದುಕೊಟ್ಟಿತು. ಧನ್ಯವಾದಗಳು. ನಾನು ಚಿಕ್ಕವನಾಗಿದ್ದಾಗ, ತಪ್ಪು ಮಾಡಿದಾಗಲೆಲ್ಲ ನನ್ನ ತಾಯಿ ಇದೇ ತರಹ ನನ್ನ ತಲೆಗೆ ಬಲವಾಗಿ ಇಕ್ಕರಿಸುತ್ತಿದ್ದರು'' ಎಂದೆ ನಗುತ್ತ.

ನನ್ನ ಮಾತನ್ನು ಕೇಳಿ ಆ ಯುವತಿ, ಅಕ್ಕಪಕ್ಕದಲ್ಲಿ ಕುಳಿತ ಪ್ರವಾಸಿಗರು ನಕ್ಕು ಸಂತೋಷಪಟ್ಟದ್ದರಲ್ಲಿ ನನ್ನ ನೋವು ಶಮನವಾಯಿತು.

2. ನೆಲ್ಲಿ ಅಡಿಕೆ ಮತ್ತು ನೀರಡಿಕೆ

ಕೊಲ್ಹಾಪುರದಿಂದ ಪುಣೆಗೆ ಹೊರಟಾಗಿನ ಪ್ರಸಂಗ

ಬಿಸಿಲು ರಣಗುಡುತ್ತಿತ್ತು. ಬಿಸಲೇರಿ ಬಾಟಲೊಂದನ್ನು ತಂದು ಕುಡಿಯತೊಡಗಿದೆ. ಬೆಳಗಾವಿಯ ಸಿಹಿಸಿಹಿ ನೀರು ಕುಡಿಯುವ ನನಗೆ ಆ ನೀರು ಅಷ್ಟೊಂದು ರುಚಿಸಲಿಲ್ಲ. ಬಾಟಲಿಯ ಬಾಯನ್ನು ಮುಚ್ಚತೊಡಗಿದೆ.

ಅಷ್ಟರಲ್ಲಿ ನೆಲ್ಲಿಕಾಯಿ ಅಡಿಕೆ ಮಾರುವ ಪ್ರೌಢ ವಯಸ್ಸಿನ ಮಹಿಳೆಯೊಬ್ಬಳು ನನ್ನನ್ನು ನೋಡುತ್ತಿರುವಂತಿತ್ತು. ನನ್ನ ಬಳಿ ಆಕೆ ಬಂದು "ನೆಲ್ಲಿ ಅಡಿಕೆ ತಿಂದು ನೀರು ಕುಡಿಯಿರಿ ನಾಲಿಗೆಗೆ ನೀರು ಬಹಳ ರುಚಿಹತ್ತಾವ. ಹೊಟ್ಟೆಗೂ ಹಿತ ಅನಿಸ್ತದ" ಎಂದೆನ್ನುತ್ತ ನೆಲ್ಲಿ ಅಡಿಕೆಗಳ ಚೀಟುಗಳನ್ನು ನನ್ನ ಮುಂದೆ ಹಿಡಿದಳು.

ಅವಳ ಸಂದರ್ಭೋಚಿತ ಮಾತುಗಳು ನನ್ನ ಮನಸ್ಸನ್ನು ಗೆದ್ದವು. ಕೂಡಲೆ ಅವಳಿಂದ ಅಡಿಕೆ ಚೀಟೊಂದನ್ನು ಕೊಂಡು ಬಾಯೊಳಗೊಂದು ಹೋಳನ್ನು ಹಾಕಿಕೊಂಡೆ. ಆ ಮೇಲೆ ನೀರು ಕುಡಿದೆ. ಅಕ್ಷರಶಃ ಅರ್ಧ ಬಾಟಲು ನೀರನ್ನು ಕುಡಿದು ತಣಿದೆ.

ಹೇರ್ ಕಟ್

ಹೋಗುತ್ತಿದ್ದ ಒಂದಾನೊಂದು ಕಾಲದಲ್ಲಿ
ಹೇರ್ ಕಟ್‌ಗೆ ತಿಂಗಳಿಗೊಮ್ಮೆ
ವರುಷಗಳುರುಳುತ್ತಾ
ಕೂದಲುಗಳುದುರುತ್ತಾ
ಆಗಿತ್ತು ಈ ಪಯಣ
ಮೂರು ತಿಂಗಳಿಗೊಮ್ಮೆ
ಐವತ್ತು ದಾಟಿದ ಈಗ
ಆಗುತ್ತಿದೆ ವರುಷಕ್ಕೊಮ್ಮೆ
ಹೇರ್ ಕೌಂಟ್!!

– ಎನ್. ನಾಗರಾಜ



Printed by V.R. NATH for the Publisher KORAVANJI APARANJI TRUST. Published by KORAVANJI APARANJI TURST, 36, 6th Main Road, Malleswaram, Bangalore - 560 003.
PRINTED AT RAVI GRAPHICS, 49, 4th Cross, SSI Area, Rajajinagar, Bangalore - 560 010.
Editor: M. SHIVAKUMAR